[illegible]

KA / BG-GPO/2515/WPP-47/2009-2011

ALTERNATIVE LAW FORUM
BANGALORE

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫ | ಬೆಂಗಳೂರು, ಗುರುವಾರ, ಜನವರಿ ೨೧, ೨೦೧೦ (ಮಾಘ ೧, ಶಕವರ್ಷ ೧೯೩೧) | ಸಂಚಿಕೆ ೩

ವಿಷಯಸೂಚಿ

ವಿ.ರಾ. ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
27	11.1.2010	ಸಂ. ಗ್ರಾಅಪ 227 ಜಿಪಸ 2009, ದಿ. 30.12.2009 – ಯಾದಗಿರಿ ಜಿಲ್ಲಾ ಪಂಚಾಯತಿಗೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.
28	11.1.2010	ಸಂ. ಸಿಐ 170 ಎಸ್‌ಪಿಕ್ಯೂ 2009, ದಿ. 11.1.2010 – ಕ.ಕೈ.ಪ್ರ.ಕಾ. ವಿಧಿ 4ರ ಮೇರೆಗೆ ಮೈಸ್ರರು ಜಿಲ್ಲೆಯ ತಾಂಡವಪುರ ಗ್ರಾಮಕ್ಕೆ ಸಂಬಂಧಿಸಿದ ಅಧಿಸೂಚನೆ.
29	11.1.2010	ಸಂ. ಕವಿಪ:ಶಾರಶಾ:15:ವಿಪನಾ:06, ದಿ. 11.1.2010 – ಶ್ರೀಮತಿ ಮೋಟಮ್ಮ, ವಿ.ಪ.ಸದಸ್ಯರು ಇವರಿಗೆ ವಿರೋಧಪಕ್ಷದ ನಾಯಕರ ಮಾನ್ಯತೆ ನೀಡುವ ಬಗ್ಗೆ.
30	11.1.2010	ಸಂ. ಸಿಐ 312 ಎಸ್‌ಪಿಕ್ಯೂ 2009, ದಿ. 8.1.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರಡಿ ದ.ಕನ್ನಡ ಜಿಲ್ಲೆಯ ಬಡಗ ಉಳಪಾಡಿ ಮತ್ತು ಮೊಗರು ಗ್ರಾಮಕ್ಕೆ ಸಂಬಂಧಿಸಿದ ಅಧಿಸೂಚನೆ.
31	11.1.2010	ಸಂ. ಸಿಐ 398 ಎಸ್‌ಪಿಕ್ಯೂ 2009, ದಿ. 1.1.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 3(1) 1(3) 28(1)ರಡಿ ಚಿಕ್ಕಮಗಳೂರು ಜಿಲ್ಲೆಯ ಅಂಬಳೆ ಗ್ರಾಮಕ್ಕೆ ಸಂಬಂಧಿಸಿದ ಅಧಿಸೂಚನೆ.
32	12.1.2010	ಸಂ. ನಅಇ 139 ಎಂಎಲ್‌ಆರ್ 2008, ದಿ. 12.1.2010 – ದಿನಾಂಕ: 15.12.2009ರ ಮೀಸಲಾತಿ ಮಾರ್ಗಸೂಚಿಯನ್ನು ಹಿಂಪಡೆಯುವ ಬಗ್ಗೆ.
33	12.1.2010	ಸಂ. ಕಾಇ 421 ಎಲ್‌ಇಟಿ 2009, ದಿ. 12.1.2010 – ತಿದ್ದುಪಡಿ ಅಧಿಸೂಚನೆ.
34	13.1.2010	ಸಂ. ಸಿಐ 07 ಎಸ್‌ಪಿಕ್ಯೂ 2010, ದಿ. 13.1.2010 – ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ 1897ರ ಜನರಲ್ ಕ್ಲಾಸಸ್ ಕಾಯ್ದೆಯ ಕಲಂ 21ರನ್ವಯ ರದ್ದುಪಡಿಸುವ ಅಧಿಸೂಚನೆ.
35	13.1.2010	No. DPAR 1 SAMVYAVI 2010, Dt. 13.1.2010 – Prorogue the KLC & KLA.
36	15.1.2010	No. CEN.CR.03/09-10, Dt. 6.1.2010 - ಭಾರತ ಜನಗಣತಿ 2011 – ಜನಗಣತಿ ಅಧಿಕಾರಿಗಳ ನೇಮಕಾತಿ ಬಗ್ಗೆ.
37	16.1.2010	No. MWD 193 WES 2009, Dt. 16.1.2010 – Supersession of Karnataka State Board of Wakfs- reg.
38	16.1.2010	ಸಂ. ಸಿಐ 574 ಎಸ್‌ಪಿಕ್ಯೂ 2009, ದಿ. 16.1.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 3(1) 1(3) 28(1)ರಡಿ ಬಿಜಾಪುರ ಜಿಲ್ಲೆಯ ಮುಳವಾಡ ಗ್ರಾಮಕ್ಕೆ ಸಂಬಂಧಿಸಿದ ಭೂಸ್ವಾಧೀನ ಅಧಿಸೂಚನೆ.
39	16.1.2010	No. MAG(2)/AM/5/2009-10 – Dt. 8.1.2010 - Controlling of places of public entertainment.
40	18.1.2010	ಸಂ. ಚುನಾವಣೆ. ಸಿಆರ್:95–1/2009–10, ದಿ. 18.1.2010 – ಗ್ರಾಮಪಂಚಾಯತಿ ಸಾರ್ವತ್ರಿಕ ಚುನಾವಣೆ – 2010 – ಮೀಸಲಾತಿ ಮರುಹಂಚಿಕೆ – ಚಿತ್ರದುರ್ಗ ಜಿಲ್ಲೆ – ಮೊಳಕಾಲ್ಮೂರು ತಾಲ್ಲೂಕು.
41	18.1.2010	ಸಂ. ಚುನಾವಣೆ. ಸಿಆರ್:95–2/2009–10, ದಿ. 18.1.2010 – ಗ್ರಾಮಪಂಚಾಯತಿ ಸಾರ್ವತ್ರಿಕ ಚುನಾವಣೆ – 2010 – ಮೀಸಲಾತಿ ಮರುಹಂಚಿಕೆ – ಚಿತ್ರದುರ್ಗ ಜಿಲ್ಲೆ – ಚಳ್ಳಕೆರೆ ತಾಲ್ಲೂಕು.
42	18.1.2010	ಸಂ. ಚುನಾವಣೆ. ಸಿಆರ್:95–3/2009–10, ದಿ. 18.1.2010 – ಗ್ರಾಮಪಂಚಾಯತಿ ಸಾರ್ವತ್ರಿಕ ಚುನಾವಣೆ – 2010 – ಮೀಸಲಾತಿ ಮರುಹಂಚಿಕೆ – ಚಿತ್ರದುರ್ಗ ಜಿಲ್ಲೆ – ಚಿತ್ರದುರ್ಗ ತಾಲ್ಲೂಕು.
43	18.1.2010	ಸಂ. ಚುನಾವಣೆ. ಸಿಆರ್:95–4/2009–10, ದಿ. 18.1.2010 – ಗ್ರಾಮಪಂಚಾಯತಿ ಸಾರ್ವತ್ರಿಕ ಚುನಾವಣೆ – 2010 – ಮೀಸಲಾತಿ ಮರುಹಂಚಿಕೆ – ಚಿತ್ರದುರ್ಗ ಜಿಲ್ಲೆ – ಹಿರಿಯೂರು ತಾಲ್ಲೂಕು.
44	18.1.2010	ಸಂ. ಚುನಾವಣೆ. ಸಿಆರ್:95–5/2009–10, ದಿ. 18.1.2010 – ಗ್ರಾಮಪಂಚಾಯತಿ ಸಾರ್ವತ್ರಿಕ ಚುನಾವಣೆ – 2010 – ಮೀಸಲಾತಿ ಮರುಹಂಚಿಕೆ – ಚಿತ್ರದುರ್ಗ ಜಿಲ್ಲೆ – ಹೊಳಲ್ಕೆರೆ ತಾಲ್ಲೂಕು.
45	18.1.2010	ಸಂ. ಚುನಾವಣೆ. ಸಿಆರ್:95–6/2009–10, ದಿ. 18.1.2010 – ಗ್ರಾಮಪಂಚಾಯತಿ ಸಾರ್ವತ್ರಿಕ ಚುನಾವಣೆ – 2010 – ಮೀಸಲಾತಿ ಮರುಹಂಚಿಕೆ – ಚಿತ್ರದುರ್ಗ ಜಿಲ್ಲೆ – ಹೊಸದುರ್ಗ ತಾಲ್ಲೂಕು.

ವಾರದ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

೨೦೦೯–೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4.	ಭಾಗ - 4	3-00	240-00
5.	ಭಾಗ - 4ಎ	8-00	285-00
6.	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು)................................	7-00	325-00
8.	ಭಾಗ - 6ಎ (ಮೈಸೂರು)................................	50-00	1111-00
9.	ಭಾಗ - 6ಬಿ (ಧಾರವಾಡ)................................	25-00	1637-00
10.	ಭಾಗ - 6ಸಿ (ಗುಲ್ಬರ್ಗ)................................	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯–೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ ಕ್ರಮ ಸಂಖ್ಯೆ 1 ಮತ್ತು 3
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :- 1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು "0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು" ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಜನವರಿ ೨೧, ೨೦೧೦ (ಮಾಘ ೧, ಶಕ ವರ್ಷ ೧೯೩೧)	ಸಂಚಿಕೆ ೩

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ನೌಕರರ ನಿವೃತ್ತಿ ವಯಸ್ಸನ್ನು 58 ರಿಂದ 60 ವರ್ಷಗಳಿಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 44 ಸೇವಿಸಿ 2008, ದಿನಾಂಕ: 28–7–2008.
2. ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 44 ಸೇವಿಸಿ 2008, ದಿನಾಂಕ: 13–8–2008.
3. ಪತ್ರ ಸಂಖ್ಯೆ: ವಾಕೈ 44 ರೇಉನಿ 2008, ದಿನಾಂಕ: 13–11–2008.
4. ಪತ್ರ ಸಂಖ್ಯೆ: ಕೆಎಸ್‌ಎಂಬಿ/ಆಡಳಿತ/ಎ1/ಪಿಇಆರ್–ಇಎಸ್‌ಟಿ–6/2008–09/1273, ದಿನಾಂಕ: 20.12.2008.
5. ಪತ್ರ ಸಂಖ್ಯೆ: ವಾಕೈ 44 ರೇಉನಿ 2008, ದಿನಾಂಕ: 31–1–2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಆದೇಶದಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58 ವರ್ಷಗಳಿಂದ 60 ವರ್ಷಗಳಿಗೆ ಹೆಚ್ಚಿಸಿರುತ್ತದೆ. ಈ ಸೌಲಭ್ಯವನ್ನು ಸಾರ್ವಜನಿಕ ವಲಯದ ಉದ್ಯಮಗಳ ಕಂಪೆನಿ/ಮಂಡಳಿ/ನಿಗಮದ ನೌಕರರಿಗೆ ವಿಸ್ತರಿಸಲು ಕ್ರಮ ಕೈಗೊಳ್ಳುವಂತೆ ಮೇಲೆ ಓದಲಾದ ಕ್ರಮಸಂಖ್ಯೆ (2) ರ ಅ.ಟಿ.ಯಲ್ಲಿ ನಿರ್ದೇಶಿಸಲಾಗಿರುತ್ತದೆ. ಅದರಂತೆ, ನಿವೃತ್ತಿ ವಯಸ್ಸನ್ನು 58 ರಿಂದ 60 ಕ್ಕೆ ಹೆಚ್ಚಿಸಲು ಕ್ರಮತೆಗೆದುಕೊಳ್ಳುವಂತೆ ಕ್ರಮಸಂಖ್ಯೆ (3)ರ ಪತ್ರದಲ್ಲಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗೆ ಸೂಚಿಸಲಾಗಿತ್ತು. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಹದಗೆಟ್ಟ ಆರ್ಥಿಕ ಪರಿಸ್ಥಿತಿ ಹಾಗೂ ಅದು ಪ್ರಾರಂಭಿಸಿರುವ ಆರ್ಥಿಕ ಮಿತವ್ಯಯದ ಹಿನ್ನೆಲೆಯಲ್ಲಿ ಮಂಡಳಿಯು ತನ್ನ ನೌಕರರ ವಯಸ್ಸನ್ನು 58 ವರ್ಷಗಳಿಗೆ ಉಳಿಸಿಕೊಳ್ಳಲು ತೀರ್ಮಾನಿಸಿ ಈ ಬಗ್ಗೆ ಸರ್ಕಾರದ ಅನುಮೋದನೆ ನೀಡುವಂತೆ ಮೇಲೆ ಓದಲಾದ ಕ್ರಮಸಂಖ್ಯೆ (4)ರ ಪತ್ರದಲ್ಲಿ ಸರ್ಕಾರವು ಕೋರಿದ್ದ ಹಿನ್ನೆಲೆಯಲ್ಲಿ ಕಂಪೆನಿಯು ಸತತವಾಗಿ ನಷ್ಟದಲ್ಲಿರುವುದರಿಂದ ಮತ್ತು ಸದರಿ ಕಂಪೆನಿಯನ್ನು ಮುಚ್ಚುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದ ಹಿನ್ನೆಲೆಯಲ್ಲಿ ನಿವೃತ್ತಿ ವಯಸ್ಸನ್ನು 58 ವರ್ಷಗಳಿಗೆ ಉಳಿಸಿಕೊಳ್ಳಲು ಸರ್ಕಾರದ ಅನುಮೋದನೆಯನ್ನು ಮೇಲೆ ಓದಲಾದ ಕ್ರಮಸಂಖ್ಯೆ (5) ರ ಪತ್ರದಲ್ಲಿ ನೀಡಲಾಯಿತು.

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ನೌಕರರ ನಿವೃತ್ತಿ ವಯಸ್ಸನ್ನು 58 ವರ್ಷಗಳಿಗೆ ಉಳಿಸಿಕೊಂಡ ಕ್ರಮವನ್ನು ಪ್ರಶ್ನಿಸಿ ನಿವೃತ್ತಿ ಹೊಂದಿದ ಮಂಡಳಿಯ ನೌಕರರು ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದರು. ಈ ಪ್ರಕರಣಗಳಲ್ಲಿ ನ್ಯಾಯಾಲಯವು ತೀರ್ಪು ನೀಡಿ 58 ವರ್ಷಗಳಿಗೆ ನಿವೃತ್ತಿ ವಯಸ್ಸನ್ನು ಉಳಿಸಿಕೊಳ್ಳುವ ಮಂಡಳಿಯ ತೀರ್ಮಾನಕ್ಕೆ ಸರ್ಕಾರವು ಅನುಮೋದನೆ ನೀಡಿರುವುದು, ಕರ್ನಾಟಕ ನಾಗರೀಕ ಸೇವಾ (ವ್ಯವಹಾರ ನಿರ್ವಹಣೆ) ನಿಯಮಗಳು 1977ರ ಪ್ರಕಾರ ಇರುವುದಿಲ್ಲವಾದ್ದರಿಂದ ಅದು ಸಿಂಧುವಲ್ಲವೆಂದು ತಿಳಿಸಿ, ಸದರಿ ಆದೇಶವನ್ನು ರದ್ದುಗೊಳಿಸಿತು. ಈ ಹಿನ್ನೆಲೆಯಲ್ಲಿ ವಿಷಯವನ್ನು ಕರ್ನಾಟಕ ನಾಗರೀಕ ಸೇವಾ (ವ್ಯವಹಾರ ನಿರ್ವಹಣೆ) ನಿಯಮಗಳು 1977ರ ಪ್ರಕಾರ ಮರು ಪರಿಶೀಲಿಸಲಾಯಿತು ಮತ್ತು ಸರ್ಕಾರದ ನೀತಿಯಲ್ಲಿ ಏಕರೂಪತೆ ಕಾಪಾಡುವ ದೃಷ್ಟಿಯಿಂದ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ನೌಕರರ ನಿವೃತ್ತಿ ವಯಸ್ಸನ್ನು ಸಹ 60 ವರ್ಷಗಳಿಗೆ ಹೆಚ್ಚಿಸಲು ತೀರ್ಮಾನಿಸಿದೆ.

I -F1 -(O)

ಸರ್ಕಾರದ ಆದೇಶ ಸಂಖ್ಯೆ: ವಾಕೈ 49 ರೇಉನಿ 2009, ಬೆಂಗಳೂರು, ದಿನಾಂಕ: 17ನೇ ಡಿಸೆಂಬರ್ 2009

ಸರ್ಕಾರದ ನೀತಿಯಲ್ಲಿ ಏಕರೂಪತೆ ಕಾಪಾಡುವ ಹಿತದೃಷ್ಟಿಯಿಂದ ಸರ್ಕಾರದ ಸ್ವಾಧೀನದ ಎಲ್ಲಾ ಸಾರ್ವಜನಿಕ ಉದ್ಯಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ನಿವೃತ್ತಿ ವಯಸ್ಸನ್ನು 60 ವರ್ಷಕ್ಕೆ ನಿಗದಿಪಡಿಸಲು ತೀರ್ಮಾನಿಸಲಾಗಿರುವುದರಿಂದ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ನೌಕರರ ನಿವೃತ್ತಿ ವಯಸ್ಸನ್ನೂ ಸಹ 58 ರಿಂದ 60 ವರ್ಷಗಳಿಗೆ ಭವಿಷ್ಯವರ್ತಿಯಾಗಿ ಹೆಚ್ಚಿಸಲು ತೀರ್ಮಾನಿಸಲಾಗಿದೆ. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಅದರಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2862

ಭಾರತಿ ಆರ್. ನಾಯಕ್

ಪೀಠಾಧಿಕಾರಿ (ರೇಷ್ಮೆ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಿಷಯ: ಮೆ. ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿಯಲ್ಲಿ ಹೊಸ ಶಾಫ್ಟ್ ಅಭಿವೃದ್ಧಿ ಪಡಿಸುವ ಕುರಿತು.

ಓದಲಾಗಿದೆ: HGML ನ ವ್ಯವಸ್ಥಾಪಕ ನಿರ್ದೇಶಕರ ದಿ: 22-08-2009ರ ಅ.ಸ.ಪತ್ರ ಸಂಖ್ಯೆ: 9/RO/HGML/2009.

ಪ್ರಸ್ತಾವನೆ:

ಮೇಲೆ ಓದಲಾದ ದಿ:22-08-09ರ ಪತ್ರದಲ್ಲಿ, ಹಟ್ಟಿ ಚಿನ್ನದ ಗಣಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಹಟ್ಟಿಯಲ್ಲಿ ಸಂಸ್ಥೆಯು ಹೊಂದಿರುವ ಚಿನ್ನದ ಗಣಿಯಲ್ಲಿ ಹೊಸ ಶಾಫ್ಟ್ ಅಭಿವೃದ್ಧಿ ಪಡಿಸುವ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅದರ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

1) ಹಟ್ಟಿ ಚಿನ್ನದ ಗಣಿ ಕಂಪನಿಯ ಮುಖ್ಯ ಭೂಗತ ಘಟಕವು ಹಟ್ಟಿಯಲ್ಲಿದ್ದು, ಹಾಲಿ ಮೂರು ಶಾಫ್ಟ್‌ಗಳು 1) ಮಲ್ಲಪ್ಪ ಶಾಫ್ಟ್ 2) ಸೆಂಟ್ರಲ್ ಶಾಫ್ಟ್ 3) ವಿಲ್ಲೇಜ್ ಶಾಫ್ಟ್‌ಗಳು ನಾಲ್ಕು ಚಿನ್ನದ ಅದಿರು ಇರುವ ಮಧ್ಯದ ಬಂಡೆ ಸಾಲು ಓಕ್ಲೇಸ್ ಬಂಡೆಸಾಲು, ಒಂದನೆ ವಲಯದ ಬಂಡೆ ಸಾಲು ಮತ್ತು ಸ್ಟ್ರೈಕ್ ರೀಫ್‌ಗಳಲ್ಲಿ ಅದಿರು ತೆಗೆಯುವುದು/ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರುತ್ತವೆ. ಹಟ್ಟಿಯ ಭೂಮಿಯೊಳಗಿನ ಗಣಿಯು ಹಾಲಿ 20 ಮಟ್ಟಗಳವರೆಗೆ (2000 ಅಡಿಗಳ ವರೆಗೆ) ಕಾರ್ಯನಿರ್ವಹಿಸುತ್ತಿದ್ದು, ಈ ಮೂರು ಶಾಫ್ಟ್‌ಗಳು ಗಣಿಯಲ್ಲಿ 20ನೇ ಮಟ್ಟದವರೆಗೆ ಚಿನ್ನದ ನಿಕ್ಷೇಪಗಳನ್ನು ಲಾಭದಾಯಕವಾಗಿ ಬಳಸಿಕೊಳ್ಳುವಲ್ಲಿ ತುಂಬಾ ಉಪಯುಕ್ತವಾಗಿವೆ. ಆದರೆ ಇವುಗಳ ಸಾಮರ್ಥ್ಯವು 21ನೇ ಮಟ್ಟದ ಆಳದಿಂದ ಕಾರ್ಯನಿರ್ವಹಿಸಲು ಅಂದರೆ ಕೆಲಸಗಾರರನ್ನು/ಸಾಮಗ್ರಿಗಳನ್ನು ಕೆಳಗಿಳಿಸಲು ಮತ್ತು ಅದಿರನ್ನು ಮೇಲೆತ್ತಲು ತುಂಬಾ ಸಮರ್ಥವಾಗಿಲ್ಲ. ಇಪ್ಪತ್ತನೇ ಮಟ್ಟದವರೆಗಿನ ಚಿನ್ನದ ನಿಕ್ಷೇಪವು ಖಾಲಿಯಾಗುತ್ತಿದ್ದು/ಕಡಿಮೆಯಾಗುತ್ತಿರುವುದರಿಂದ, ಕಂಪನಿಯು ಈಗಾಗಲೇ 21 ರಿಂದ 24ನೇ ಮಟ್ಟದವರೆಗೆ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿದ್ದು, ಭವಿಷ್ಯದಲ್ಲಿ ಬೇಗನೇ 30ನೇ ಮಟ್ಟದಲ್ಲಿ (3000 ಅಡಿ ಆಳದಲ್ಲಿ) ಕಾರ್ಯನಿರ್ವಹಿಸುವುದು. ಆದ್ದರಿಂದ ಚಿನ್ನದ ಗಣಿಯ ಕಾರ್ಯಗಳನ್ನು ಜೀವಂತವಾಗಿರಿಸಿಕೊಂಡು ಹೋಗಲು ಪ್ರಸ್ತಾಪಿಸಿದ 6 ಮೀ (20 ಅಡಿ) ವ್ಯಾಸದ ಹೊಸ ಶಾಫ್ಟ್‌ನ್ನು 1100 ಮೀ (3300 ಅಡಿಗಳು) ಆಳಕ್ಕೆ ಕೊರೆಯುವುದು ಅತ್ಯಾವಶ್ಯಕವಾಗಿ ಆಗಬೇಕಾಗಿದೆ ಎಂದು ವ್ಯವಸ್ಥಾಪಕರು, ನಿರ್ದೇಶಕರು, ಹಟ್ಟಿ ಚಿನ್ನದ ಗಣಿ ಕಂಪನಿ, ಇವರು ತಮ್ಮ ದಿ: 22-08-09ರ ಪತ್ರದಲ್ಲಿ ತಿಳಿಸಿರುತ್ತಾರೆ.

2) ಪ್ರಸ್ತಾಪಿಸಲಾದ ಹೊಸ ಶಾಫ್ಟ್‌ನ ಪ್ರಯೋಜನಗಳು :

ಎ) ಅದಿರು ಉತ್ಪಾದನೆಯಲ್ಲಿ ಹೆಚ್ಚಳ ಮತ್ತು ವರ್ಷಕ್ಕೆ 7 ಲಕ್ಷ ಟನ್‌ಗಳಷ್ಟನ್ನು ಮೇಲೆತ್ತುವುದು.

ಬಿ) ಒಂದು ಸಲಕ್ಕೆ 100 ಮಂದಿ ಕೆಲಸಗಾರರನ್ನು ಇಳಿಸಿ ಮೇಲೆತ್ತುವ ಸಾಮರ್ಥ್ಯವನ್ನು ಹೊಂದುವುದು.

ಸಿ) ಗಣಿಯೊಳಗೆ ಆಳಕ್ಕೆ ಶುದ್ಧ ಗಾಳಿಯನ್ನು ಒತ್ತಡದಿಂದ ನುಗ್ಗಿಸಿ, ವಾತಾಯನ ವ್ಯವಸ್ಥೆಯನ್ನು ಸುಧಾರಿಸಿ ಕಡ್ಡಾಯವಾದ ಗಣಿ ಸುರಕ್ಷತಾ ಗುಣಮಟ್ಟವನ್ನು ಅಳವಡಿಸಿಕೊಳ್ಳುವುದು.

ಡಿ) ದೊಡ್ಡ ಪ್ರಮಾಣದ ಗಣಿಕಾರಿಕಾ ಉಪಕರಣಗಳನ್ನು ಬಿಚ್ಚದೇ ಭೂ ಒಳಗಿನ ಗಣಿಗೆ ಕೆಳಗಿಳಿಸಲು ಸಾಮರ್ಥ್ಯಗೊಳಿಸುವುದು.

ಇ) ಹೊಸ ಶಾಫ್ಟ್ ಗಣಿಯ ಮುಖ್ಯ ಹೊರದಾರಿಯಾಗಿ ಕಾರ್ಯನಿರ್ವಹಿಸುವುದು ಮಲ್ಲಪ್ಪ ಶಾಫ್ಟ್ ಎರಡನೇ ಹೊರದಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಇದು ಗಣಿ ಸುರಕ್ಷತೆಯ ಶಾಸನಬದ್ಧ ಅಗತ್ಯವನ್ನು ಪೂರೈಸುತ್ತದೆ.

ಎಫ್) ದಿನಕ್ಕೆ 2000 ಟನ್ ಸಾಮರ್ಥ್ಯದ, 68.22 ಕೋಟಿ ವೆಚ್ಚದ ಸ್ಯಾಗ್ ಮತ್ತು ಬಾಲ್‌ಮಿಲ್ ಚಿನ್ನದ ಅದಿರನ್ನು ಪುಡಿಗಟ್ಟುವ ಕಾರ್ಯವನ್ನು 2009ರ ನವೆಂಬರ್‌ನಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ. ಈ ಹೊಸ ಮಿಲ್‌ಗೆ ಅದಿರನ್ನು ಪೂರೈಸಲು ಪ್ರಸ್ತಾಪಿಸಲಾದ ಹೊಸ ಶಾಫ್ಟ್‌ನ್ನು ಕಾರ್ಯಾರಂಭ ಮಾಡುವುದರ ಮೂಲಕ ಅದಿರನ್ನು ಮೇಲೆತ್ತುವ ಸಾಮರ್ಥ್ಯವನ್ನು ಹೆಚ್ಚಿಸುವುದು ಅಗತ್ಯವಾಗಿರುತ್ತದೆ.

3) ಪ್ರಸ್ತಾಪಿಸಲಾದ ಹೊಸ ಶಾಫ್ಟ್‌ಗೆ 2008ರಲ್ಲಿ ರೂ. 130.50 ಕೋಟಿಗಳಾಗಬಹುದೆಂದು ಅಂದಾಜು ಮಾಡಲಾಗಿತ್ತು ಹಟ್ಟಿ ಚಿನ್ನದ ಗಣಿ ಕಂಪನಿ ನಿರ್ದೇಶಕರ ಮಂಡಳಿಯು ದಿನಾಂಕ: 14-6-2008ರಂದು ನಡೆದ ತನ್ನ 344ನೇ ಸಭೆಯಲ್ಲಿ ಈ ಪ್ರಸ್ತಾವನೆಯನ್ನು 4 ವರ್ಷಗಳ ಅವಧಿಯಲ್ಲಿ ಕಾರ್ಯಗತಗೊಳಿಸಲು ಒಪ್ಪಿಗೆ ನೀಡಿತ್ತು. ಹಟ್ಟಿ ಚಿನ್ನದ ಗಣಿ ಕಂಪನಿಯು ಈಗ ಅಂದಾಜು ಪಟ್ಟಿಯನ್ನು ಪುನರ್‌ವಿಮರ್ಶಿಸಿದ್ದು, ಯೋಜನೆಯನ್ನು 204.89ಕೋಟಿ ವೆಚ್ಚದಲ್ಲಿ (ವಾರ್ಷಿಕ ಸುಮಾರು ಶೇ. 10ರ ಏರಿಕೆಯಾಗಬಹುದೆಂಬ ನಿರೀಕ್ಷೆಯಲ್ಲಿ) 2010-11ರಿಂದ ಪ್ರಾರಂಭಿಸಿ 2013-14ರಲ್ಲಿ ಪೂರೈಸುವ ಗುರಿ ಹೊಂದಿದೆ.

4) ನಾಲ್ಕು ವರ್ಷಗಳ ಅವಧಿಯಲ್ಲಿ ಹೂಡಿಕೆ ಮಾಡುವ 204.89 ಕೋಟಿ ರೂ.ಗಳಿಂದ ವಾರ್ಷಿಕ 598.75 ಕೆ.ಜಿ ಚಿನ್ನವನ್ನು ಹೆಚ್ಚಿಗೆ ಉತ್ಪಾದಿಸಲಾಗುವುದೆಂದು ಅಂದಾಜಿಸಲಾಗಿದೆ. ಸಾಧಾರಣವಾದ ಮಾರಾಟ ಬೆಲೆಯನ್ನು ಗ್ರಾಂಗೆ 1300/- ರೂ. ಗಳನ್ನಿಟ್ಟುಕೊಂಡರೂ, ವಾರ್ಷಿಕ 77.83 ಕೋಟಿ. ರೂ.ಗಳ ಅಧಿಕ ಆದಾಯ ಬರುವ ನಿರೀಕ್ಷೆಯಿದ್ದು, ಏರಿಕೆಯಾದ ಉತ್ಪಾದನಾ ವೆಚ್ಚವನ್ನು ಕಳೆದು ಮತ್ತು ತೆರಿಗೆಗಳಿಗೆ ತೆಗೆದಿಟ್ಟ ಬಳಿಕ, ವಾರ್ಷಿಕ ತೆರಿಗೆ (ನಂತರ) ಬಳಿಕೆ ಉಳಿಕೆ (ಹೆಚ್ಚಿಗೆಯಾದ) ಹಣವು 26.62 ಕೋಟಿಗಳಾಗಿದ್ದು, ಮರುಪಾವತಿ ಅವಧಿಯು 7.70 ವರ್ಷಗಳಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು ತಿಳಿಸಿರುತ್ತಾರೆ.

5) ಹಟ್ಟಿ ಚಿನ್ನದ ಗಣಿ ಕಂಪನಿಯ ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಾರಂಭಿಕ ಕ್ರಮಗಳನ್ನು ತೆಗೆದುಕೊಂಡು ವ್ಯಾಪಾರ ನಿಯಮಗಳ ಕರಾರುಗಳಂತೆ ಸರ್ಕಾರದ ಸಾಂಪ್ರದಾಯಿಕ ಅನುಮೋದನೆಯನ್ನು ಕೋರಿರುತ್ತದೆ. ಹಟ್ಟಿ ಚಿನ್ನದ ಗಣಿ ಕಂಪನಿಯು ಈ ಹೊಸ ಶಾಫ್ಟ್ ಯೋಜನೆಯನ್ನು ತನ್ನ ಆಂತರಿಕ ಸಂಪನ್ಮೂಲಗಳಿಂದಲೇ ಕಾರ್ಯಗತಗೊಳಿಸುವ ಸಾಮರ್ಥ್ಯ ಹೊಂದಿದ್ದು, ಅದಕ್ಕಾಗಿ ಕರ್ನಾಟಕ ಸರ್ಕಾರದಿಂದಾಗಲೀ ಅಥವಾ ಇನ್ನಿತರ ಹಣಕಾಸು ಸಂಸ್ಥೆಗಳಿಂದಾಗಲೀ ಹಣಕಾಸಿನ ನೆರವು ಬೇಕಿರುವುದಿಲ್ಲ.

ಮೇಲಿನ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 42 ಸಿಎಂಸಿ 2008, ಬೆಂಗಳೂರು, ದಿನಾಂಕ: 17ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿನ ಅಂಶಗಳ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಹಟ್ಟಿಯಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿಯು ಹೊಂದಿರುವ ಚಿನ್ನದ ಗಣಿಯಲ್ಲಿ ಹೊಸ ಶಾಫ್ಟ್ ಅನ್ನು ಅಭಿವೃದ್ಧಿ ಪಡಿಸುವ ಕುರಿತ ಪ್ರಸ್ತಾವನೆಗೆ ಕೆಳಕಂಡ ಷರತ್ತುಗಳಿಗೊಳಪಡಿಸಿ, ಸರ್ಕಾರವು ತಾತ್ವಿಕವಾಗಿ ಒಪ್ಪಿಗೆ ನೀಡಿದೆ.

1. ರಾಯಚೂರು ಜಿಲ್ಲೆ, ಲಿಂಗಸಗೂರು ತಾಲ್ಲೂಕಿನ ಹಟ್ಟಿಯಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿಯು 204.84 ಕೋಟಿ ರೂ.ಗಳ ಪುನರ್ ವಿಮರ್ಶಿಸಿದ ಅಂದಾಜಿನಂತೆ ಹೊಸ ಶಾಫ್ಟನ್ನು 4 ವರ್ಷಗಳ ಅವಧಿಯಲ್ಲಿ ಕೊರೆಯಲು ತಾತ್ವಿಕವಾಗಿ ಒಪ್ಪಿಗೆ ನೀಡಲಾಗಿದೆ. ಈ ಒಪ್ಪಿಗೆಯು ಗುತ್ತಿಗೆ ನೀಡುವ ಪೂರ್ವದಲ್ಲಿ ಸರ್ಕಾರದ ಅನುಮೋದನೆಯನ್ನು ಪಡೆದುಕೊಳ್ಳಬೇಕೆಂಬ ಷರತ್ತಿಗೆ ಒಳಪಟ್ಟಿರುತ್ತದೆ.
2. ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ಹಟ್ಟಿ ಚಿನ್ನದ ಗಣಿಗಳ ಕಂಪನಿಯು ತನ್ನ ಆಂತರಿಕ ಸಂಪನ್ಮೂಲಗಳಿಂದಲೇ ಭರಿಸತಕ್ಕದ್ದು.
3. ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ The Karnataka transparency in Public procurement Act ನಲ್ಲಿನ ನಿಯಮ/ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ದಿ: 26-03-2009ರ ಅನಧಿಕೃತ ಟಿಪ್ಪಣಿ ಸಂಖ್ಯೆ: FD 1569 Exp-1/09 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2863

ಎ.ಪಿ. ರಾಮಕೃಷ್ಣ

ಪೀಠಾಧಿಕಾರಿ (ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇಂಧನ ಸಚಿವಾಲಯ

ವಿಷಯ: ಶ್ರೀ ಆರ್.ಬಿ. ಶಿವರಾಜು, ಲೆಕ್ಕಾಧಿಕಾರಿ, ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರು ಇವರ ಅಮಾನತ್ತನ್ನು ರದ್ದುಗೊಳಿಸಿ ಪುನರ್ ಸ್ಥಾಪಿಸುವ ಕುರಿತು.

ಓದಲಾಗಿದೆ:
1. ಮುಖ್ಯ ವಿದ್ಯುತ್ ಪರಿವೀಕ್ಷಕರ ಪತ್ರ ಸಂಖ್ಯೆ: ಮುವಿಪ/ಸಿಸಿ1/ಲ.ನಿ.ಕಾ/22540/08-09 ದಿನಾಂಕ:26.09.2008.
2. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜೆ)ಸಿ/ಕ್ರೈಂ.57/2008 ಬೆಂಗಳೂರು ದಿನಾಂಕ: 01-10-2008.
3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 103 ಇಬಿಎಸ್ 2008 ದಿನಾಂಕ: 17-11-2008.
4. ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 557/2009 ದಿನಾಂಕ: 06-02-2009.
5. ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 557/2009 ದಿನಾಂಕ: 27-07-2009.
6. ಮುಖ್ಯ ವಿದ್ಯುತ್ ಪರಿವೀಕ್ಷಕರ ಪತ್ರ ಸಂಖ್ಯೆ: ಮುವಿಪ/ಸಿಸಿ1/18058/09-10 ದಿನಾಂಕ:03-09-2009.

ಪ್ರಸ್ತಾವನೆ:

ಶ್ರೀ ಆರ್.ಬಿ. ಶಿವರಾಜು, ಲೆಕ್ಕಾಧಿಕಾರಿ, ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಮೈಸೂರ್ ಕಟ್ಟಡ, ನೆಲ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-2, ಇವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದಲ್ಲಿ ಇವರ ಮೇಲೆ ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13 (1)(ಡಿ) ರ ಜೊತೆಗೆ 13 (2)ರ ಪ್ರಕಾರ ಪೊಲೀಸ್ ಇನ್ಸ್‌ಪೆಕ್ಟರ್, ಪೊಲೀಸ್ ವಿಂಗ್, ಬೆಂಗಳೂರು ನಗರ ವಿಭಾಗ, ಲೋಕಾಯುಕ್ತ ಠಾಣೆ, ಮೊಹರು ಸಂಖ್ಯೆ: 57/2008ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (1)ರಲ್ಲಿ ಪತ್ರದಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಕರು, ಶ್ರೀ ಆರ್.ಬಿ. ಶಿವರಾಜು, ಲೆಕ್ಕಾಧಿಕಾರಿ, ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಮೈಸೂರ್ ಕಟ್ಟಡ, ನೆಲ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-2, ಇಲ್ಲಿ

ಕರ್ತವ್ಯ ನಿರ್ವಹಿಸುತ್ತಿರುವ ಇವರನ್ನು ದಿನಾಂಕ: 25-09-2008 ರಂದು ಮಧ್ಯಾಹ್ನ 3-30 ಗಂಟೆಗೆ ಲಂಚ ಸ್ವೀಕರಿಸುವಾಗ ಟ್ರ್ಯಾಪ್ ಮಾಡಿ ಕರ್ನಾಟಕ ಲೋಕಾಯುಕ್ತ ಪೊಲೀಸರು ದಸ್ತಗಿರಿ ಮಾಡಿರುವುದಾಗಿ ದಿನಾಂಕ: 25-09-2008 ರಂದು ಪೊಲೀಸ್ ಇನ್ಸ್‌ಪೆಕ್ಟರ್ ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರು ಪ್ರಕರಣಕ್ಕೆ ಸಂಬಂಧಿಸಿದಂತೆ ತಿಳುವಳಿಕೆ ಪತ್ರ ನೀಡಿರುವುದಾಗಿ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಪತ್ರದಲ್ಲಿ ಹೆಚ್ಚುವರಿ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರು ತಮ್ಮ ವರದಿಯಲ್ಲಿ ಆರೋಪಿತ ಶ್ರೀ ಆರ್.ಬಿ. ಶಿವರಾಜು, ಲೆಕ್ಕಾಧಿಕಾರಿ, ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ ಮೈಸೂರು ಶುಗರ್ ಕಟ್ಟಡ, ನೆಲ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-2, ಇವರು ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳದಲ್ಲಿಯೇ ಮುಂದುವರೆದಲ್ಲಿ, ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ/ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ-ಪುರಾವೆಗಳನ್ನು ನಾಶಪಡಿಸುವ ಸಾಧ್ಯತೆಗಳಿರುವುದರಿಂದ, ಸದರಿ ಅಧಿಕಾರಿಯರವನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ಅವರ ಲೀನ್ (ಸ್ಥಳವನ್ನು) ಅನ್ನು ಬೇರೆ ಕಡೆಗೆ ವರ್ಗಾಯಿಸುವಂತೆ ಕೋರಿರುತ್ತಾರೆ. ಹಾಗೂ ಸದರಿ ಅಧಿಕಾರಿಯವರನ್ನು ದಿನಾಂಕ:25-09-2008ರಿಂದಲೇ ಅಮಾನತ್ತಿನಲ್ಲಿಟ್ಟಿರುವುದಾಗಿ ಪರಿಗಣಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ಪತ್ರದನ್ವಯ ಸರ್ಕಾರಿ ಆದೇಶ ಸಂಖ್ಯೆ: ಇಎನ್ 103 ಇಬಿಎಸ್ 2008 ದಿನಾಂಕ: 17-11-2008ರಲ್ಲಿ ಕರ್ನಾಟಕ ನಾಗರೀಕ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957ರ ನಿಯಮ 10 (1) (ಎ) ಮೇರೆಗೆ ತನಿಖೆಯನ್ನು ಬಾಕಿ ಇಟ್ಟು ಶ್ರೀ ಆರ್.ಬಿ. ಶಿವರಾಜು, ಇವರನ್ನು ದಿನಾಂಕ: 25-09-2008ರಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (4)ರಲ್ಲಿ ಶ್ರೀ ಆರ್.ಬಿ. ಶಿವರಾಜು, ಲೆಕ್ಕಾಧಿಕಾರಿ ಇವರು ಸರ್ಕಾರಿ ಆದೇಶ ಸಂಖ್ಯೆ: ಇಎನ್ 103 ಇಬಿಎಸ್ 2008 ದಿನಾಂಕ: 17-11-2008ರ ಅಮಾನತ್ತಿನ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಲ್ಲಿಸಿದ್ದರು.

ಮೇಲೆ ಓದಲಾದ ಕ್ರಮಾಂಕ (5)ರ ಆದೇಶದಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಿಂದ ತೀರ್ಪು ದಿನಾಂಕ:27-07-2009ರಂದು ಅಂತಿಮವಾಗಿ ಹೊರಬಿದ್ದಿದ್ದು, ಸರ್ಕಾರದಿಂದ ಹೊರಡಿಸಲಾದ ಆದೇಶ ಸಂಖ್ಯೆ: ಇಎನ್ 103 ಇಬಿಎಸ್ 2008 ದಿನಾಂಕ: 17-11-2008 ನ್ನು ರದ್ದುಗೊಳಿಸಿ ಈ ಕೆಳಕಂಡಂತೆ ಆದೇಶಿಸಿದೆ.

"For the above said reasons, the application is allowed and the order of suspension No. EN 103 EBS 2008 dated : 17-11-2008 (Annexure `A4') issued by the Government is hereby quashed, keeping liberty to the Government, if it so desires, to examine the matter afresh and to pass a fresh order in the light of the observations made above".

ಮೇಲೆ ಓದಲಾದ ಕ್ರಮಾಂಕ (6)ರ ಪತ್ರದಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಕರು ಶ್ರೀ ಆರ್.ಬಿ. ಶಿವರಾಜು, ಲೆಕ್ಕಾಧಿಕಾರಿ ರವರು ಸಲ್ಲಿಸಿದ ಮನವಿ ಮತ್ತು ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 557/2009ರ ದಿನಾಂಕ:27.7.2009ರ ಆದೇಶದ ಪ್ರತಿಯನ್ನು ಸಲ್ಲಿಸಿ ಶ್ರೀ ಆರ್.ಬಿ. ಶಿವರಾಜು ಇವರಿಗೆ ಲೆಕ್ಕಾಧಿಕಾರಿ ಹುದ್ದೆಗೆ ಪುನರ್ ಸ್ಥಾಪಿಸಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 557/2009ರ ದಿನಾಂಕ: 27-7-2009ರ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸದಿರಲು ಆಡಳಿತ ಇಲಾಖೆ ನಿರ್ಣಯಿಸಿದೆ.

ಅರ್ಜಿ ಸಂಖ್ಯೆ: 557/2009ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 27-7-2009 ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಶ್ರೀ ಆರ್.ಬಿ. ಶಿವರಾಜು ಲೆಕ್ಕಾಧಿಕಾರಿ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಮೈಶುಗರ್ ಕಟ್ಟಡ, ನೆಲ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-2, ರವರ ಅಮಾನತ್ತನ್ನು ತೆರವುಗೊಳಿಸಿ, ಪುನರ್‌ಸ್ಥಾಪಿಸಲು ಕೂಲಂಕಷವಾಗಿ ಪರೀಶಿಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 35 ಇಬಿಎಸ್ 2009, ಬೆಂಗಳೂರು, ದಿನಾಂಕ: 16ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಆರ್.ಬಿ. ಶಿವರಾಜು, ಲೆಕ್ಕಾಧಿಕಾರಿ, ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ ಮೈಶುಗರ್ ಕಟ್ಟಡ, ನೆಲ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-2, ಇವರನ್ನು ಅಮಾನತ್ತುಗೊಳಿಸಿರುವ ಸರ್ಕಾರಿ ಆದೇಶ ಸಂಖ್ಯೆ ಇಎನ್ 103 ಇಬಿಎಸ್ 2008 ದಿನಾಂಕ: 17-11-2008 ನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 557/2009ರಲ್ಲಿ ದಿನಾಂಕ: 27-7-2009 ರಂದು ನೀಡಿದ್ದ ತೀರ್ಪಿನಲ್ಲಿ ರದ್ದುಗೊಳಿಸಿರುವ ಕಾರಣದಿಂದಾಗಿ ಇವರ ವಿರುದ್ಧ ಹೂಡಲಾಗಿರುವ ಟ್ರ್ಯಾಪ್ ಪ್ರಕರಣದ ಸಂಖ್ಯೆ: 57/2008ರಲ್ಲಿ ಸಕ್ಷಮ ನ್ಯಾಯಾಲಯದ ಅಂತಿಮ ತೀರ್ಮಾನವನ್ನು ಬಾಕಿ ಇಟ್ಟು, ತಕ್ಷಣದಿಂದ ಜಾರಿಗೆ ಬರುವಂತೆ ಶ್ರೀ ಆರ್.ಬಿ. ಶಿವರಾಜು, ಲೆಕ್ಕಾಧಿಕಾರಿ, ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ ಮೈಶುಗರ್ ಕಟ್ಟಡ, ನೆಲ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-2, ಇವರನ್ನು ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಲೆಕ್ಕಾಧಿಕಾರಿ ಹುದ್ದೆಗೆ ಪುನರ್ ಸ್ಥಾಪಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2847

ಸುಜಾತಮ್ಮ

ಪೀಠಾಧಿಕಾರಿ, ಇಂಧನ ಇಲಾಖೆ.

ವಿಷಯ: ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಕಲ್ಲಿದ್ದಲನ್ನು ಖರೀದಿಸುವಲ್ಲಿ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಪವರ್ ಟ್ರಾನ್ಸ್‌ಫಾರ್ಮರ್ ಖರೀದಿಸುವಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ವಿಚಾರಣೆ ನಡೆಸುವ ಕುರಿತು.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 125 ಪಿಪಿಸಿ 2009 ದಿನಾಂಕ: 13–10–2009

2. Central Pension Accounting Office, ಭಾರತ ಸರ್ಕಾರ ಇವರ ಪತ್ರ ದಿನಾಂಕ: 18–07–2009.

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರಿ ಆದೇಶ (1)ರಲ್ಲಿ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಜಸ್ಟೀಸ್ ಶ್ರೀ ವಿ.ಪಿ. ಮೋಹನ್ ಕುಮಾರ್‌ರವರನ್ನು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಕಲ್ಲಿದ್ದಲನ್ನು ಖರೀದಿಸುವಲ್ಲಿ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಪವರ್ ಟ್ರಾನ್ಸ್‌ಫಾರ್ಮರ್ ಖರೀದಿಸುವಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ವಿಚಾರಣೆಯನ್ನು ನಡೆಸಲು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ ಹಾಗೂ ಸದರಿ ಆದೇಶದಲ್ಲಿ ವಿಚಾರಣೆ ನಡೆಸುವ ನಿವೃತ್ತ ನ್ಯಾಯಾಧೀಶರ ನಿಬಂಧನೆ ಮತ್ತು ಷರತ್ತುಗಳನ್ನು ಪ್ರತ್ಯೇಕ ಆದೇಶದಲ್ಲಿ ಹೊರಡಿಸಲಾಗುವುದೆಂದು ತಿಳಿಸಲಾಗಿದೆ.

ಮೇಲೆ ಓದಲಾದ ಪತ್ರ (2)ರಲ್ಲಿ ಜಸ್ಟೀಸ್ ಶ್ರೀ ವಿ.ಪಿ. ಮೋಹನ್ ಕುಮಾರ್‌ರವರಿಗೆ ರೂ. 90,000/– (Fixed) ವೇತನ ಹಾಗೂ ಮಾಸಿಕ ನಿವೃತ್ತಿ ವೇತನ ರೂ. 22,900/– (01–01–2006 ರಿಂದ Basic Pension) ನಿಗದಿಪಡಿಸಿರುವುದನ್ನು ಗಣನೆಗೆ ತೆಗೆದುಕೊಂಡು ಅವರಿಗೆ ಮಾಸಿಕ ವೇತನ, ಮನೆ ಭತ್ಯೆ ಹಾಗೂ ಆತಿಥ್ಯ ಭತ್ಯೆಯನ್ನು (Sumptuary Allowance) ನಿಗದಿಪಡಿಸುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 125 ಪಿಪಿಸಿ 2009, ಬೆಂಗಳೂರು, ದಿನಾಂಕ: 14ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಜಸ್ಟೀಸ್ ಶ್ರೀ ವಿ.ಪಿ. ಮೋಹನ್ ಕುಮಾರ್‌ರವರಿಗೆ ಅವರು ಈಗಾಗಲೇ ಪಡೆಯುತ್ತಿರುವ ಮಾಸಿಕ ರೂ.22,900/– ನಿವೃತ್ತಿ ವೇತನವನ್ನು ಕಳೆದು ರೂ. 67,100/– ಮಾಸಿಕ ವೇತನ, ಮನೆಭತ್ಯೆ, ಆತಿಥ್ಯ ಭತ್ಯೆಯನ್ನು ನೀಡಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 1766 ವೆಚ್ಚ 1/09 ದಿನಾಂಕ:08.12.2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಜಿ. ಸಂಪತ್ ಕುಮಾರ್

ಪಿ.ಆರ್. 2848 ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ತಿದ್ದುಪಡಿ ಸಂಖ್ಯೆ: ಅಪಜೀ 25 ಇಎನ್‌ಜಿ 2008, ಬೆಂಗಳೂರು, ದಿನಾಂಕ: 25ನೇ ನವೆಂಬರ್ 2009

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ. ಅಪಜೀ 25 ಇಎನ್‌ಜಿ 2008 ದಿನಾಂಕ: 4.2.2009

ಉಲ್ಲೇಖಿತ ಆದೇಶದ ಪ್ರಸ್ತಾವನೆಯ 3ನೇ ಕಂಡಿಕೆಯ 6ನೇ ಪಂಕ್ತಿಯಲ್ಲಿನ ಅಧಿಸೂಚನೆಯ ಸಂಖ್ಯೆ ಎಫ್‌ಇಇ 273 ಎಫ್‌ಜಿಎಲ್ 2002ರ ಬದಲಿಗೆ ಎಫ್‌ಇಇ 247 ಎಫ್‌ಜಿಎಲ್ 2002 ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಮನೋಹರ್

ಪಿ.ಆರ್. 2766 ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಕಂದಾಯ ಸಚಿವಾಲಯ

ತಿದ್ದುಪಡಿ ಆದೇಶ ಸಂಖ್ಯೆ: ಕಂಇ 230 ಎಲ್‌ಆರ್‌ಎ 2009, ಬೆಂಗಳೂರು, ದಿನಾಂಕ: 26ನೇ ನವೆಂಬರ್ 2009

ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 25 ಎಲ್‌ಆರ್‌ಎ 2008 ದಿನಾಂಕ 20.10.2009 ರ ಪಟ್ಟಿಯ ಕ್ರ.ಸಂ. 2 ರಲ್ಲಿ "ರಾಯಚೂರು ಗ್ರಾಮೀಣ" ಎಂಬುದರ ಬದಲಾಗಿ "ರಾಯಚೂರು" ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ನಾರಾಯಣಗೌಡ

ಪಿ.ಆರ್. 2769 ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಸುಧಾರಣೆ)

ಒಳಾಡಳಿತ ಸಚಿವಾಲಯ

ತಿದ್ದುಪಡಿ ಸಂಖ್ಯೆ: ಒಇ 292 ಪಿಪಿಇ 2009, ಬೆಂಗಳೂರು, ದಿನಾಂಕ: 4ನೇ ಡಿಸೆಂಬರ್ 2009

ಸರ್ಕಾರದ ಆದೇಶ ಸಂಖ್ಯೆ: ಒಇ 292 ಪಿಪಿಇ 2009, ದಿನಾಂಕ: 12.10.2009ರ ಆದೇಶದ ಉಲ್ಲೇಖ (2)ರಲ್ಲಿ ತನಿಖಾಧಿಕಾರಿಯ ವರದಿ ದಿನಾಂಕ: "29.8.2009" ರ ಬದಲಾಗಿ ದಿನಾಂಕ: "27.7.2009" ಎಂದು, ಆದೇಶ ಓದಲಾಗಿದೆ ಅಂಕಣದ 1ನೇ ಕಂಡಿಕೆಯ 10ನೇ ಸಾಲಿನಲ್ಲಿ ಲಂಚ ನಿರೋಧಕ ಕಾಯ್ದೆ "19(ಸಿ)" ಬದಲಿಗೆ ಲಂಚ ನಿರೋಧಕ ಕಾಯ್ದೆ "19(1)(ಬಿ)" ಎಂದು ಮತ್ತು ಆದೇಶದ 4ನೇ ಪುಟದ ಕೊನೆ ಕಂಡಿಕೆ 2ನೇ ಸಾಲಿನಲ್ಲಿ ಕಲಂ "19(ಸಿ)" ಬದಲಿಗೆ ಕಲಂ "19(1)(ಬಿ)" ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳುವುದು. ಉಳಿದಂತೆ ದಿನಾಂಕ: 12.10.2009ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಪಿ.ಆರ್. 2780 ಸರ್ಕಾರದ ಅಧೀನ ಕಾರ್ಯದರ್ಶಿ.

ಒಳಾಡಳಿತ ಇಲಾಖೆ. (ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಇಂಧನ ಸಚಿವಾಲಯ

ವಿಷಯ: ಮೆ:: ಪಿಜಿಸಿ ಹೈಡ್ರೋ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:
1 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಅಂಜಿಂದಗುಂಡಿ ಎಂಹೆಚ್‌ಎಸ್/09/1021 ದಿನಾಂಕ:25/26.2.2009.

2 ದಿನಾಂಕ: 23.10.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಪಿಜಿಸಿ ಹೈಡ್ರೋ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಂಜಲ್ತಾರ್ ಗ್ರಾಮದ ಅಂಜಿಂದಗುಂಡಿ ಹೊಳೆಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ:: ಪಿಜಿಸಿ ಹೈಡ್ರೋ ಪವರ್ ಪ್ರಾಜೆಕ್ಟ್ಸ್ ಲಿಮಿಟೆಡ್ ಇವರಿಗೆ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುವುದರಿಂದ, ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 181 ಎನ್‌ಸಿಇ 2009, ಬೆಂಗಳೂರು, ದಿನಾಂಕ: 4ನೇ ಡಿಸೆಂಬರ್ 2009

ಮೆ:: ಪಿಜಿಸಿ ಹೈಡ್ರೋ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಂಜಲ್ತಾರ್ ಗ್ರಾಮದ ಅಂಜಿಂದಗುಂಡಿ ಹೊಳೆಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು (**Weir Latitude**: 13°12'08" **Longitude**: 75°05'42" EL 90 M and Power House Latitude : 13°12'38" Longitude : 75°05'26") ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:-

1(ಅ) ಸದರಿ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಷಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4. ಫೈನಾನ್ಷಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು

ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10 ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12 ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2794

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ಕಾರ್ಮಿಕ ಸಚಿವಾಲಯ

ವಿಷಯ: 2008-09ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಯೋಜನೆಯಾದ "ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ 1396 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಉನ್ನತೀಕರಣ" ಅಡಿಯಲ್ಲಿ ಡಿಜಿಇಟಿ ಯಿಂದ ಅನುಮೋದನೆಯಾಗಿರುವ 26 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಉನ್ನತೀಕರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: LD 121 ETI 2007 Dt. 04/03/2008

2) ಉದ್ಯೋಗ ಮತ್ತು ತರಬೇತಿ ಇಲಾಖೆರವರ ಪತ್ರ ಸಂ. ಉತನಿ/ತರಬೇತಿ/ಸಿಒಇ-ಪಿಪಿಪಿ/ವಿವ-55/2007-08 ದಿನಾಂಕ: 27/05/2009 ಮತ್ತು 10/08/2009.

ಪ್ರಸ್ತಾವನೆ:

ಮೇಲೆ(1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2007-08ನೇ ಸಾಲಿನಲ್ಲಿ ಉನ್ನತೀಕರಿಸಲಾದ 26 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಉನ್ನತೀಕರಿಸಲು ಹಾಗೂ ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರು ಕೇಂದ್ರ ಸರ್ಕಾರವು ಕಳುಹಿಸಿರುವ ಮೆಮೊರಾಂಡಮ್ ಆಫ್ ಅಸೋಸಿಯೇಷನ್‌ಗೆ ಸಹಿ ಮಾಡಲು ಅನುಮೋದನೆ ನೀಡಲಾಗಿದೆ. ಅಲ್ಲದೆ ಈ ಸಂಸ್ಥೆಗಳಿಗೆ ಐಎಂಸಿಯನ್ನು ರಚಿಸಲು ಹಾಗೂ ಅವುಗಳಿಗೆ ಆರ್ಥಿಕ ಹಾಗೂ ಆಡಳಿತಾತ್ಮಕ ಅಧಿಕಾರಗಳನ್ನು ಪ್ರತ್ಯಾಯೋಜಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ(2)ರಲ್ಲಿ ಓದಲಾದ ಉದ್ಯೋಗ ಮತ್ತು ತರಬೇತಿ ಇಲಾಖೆರವರ ಪತ್ರಗಳಲ್ಲಿ 2008-09ನೇ ಸಾಲಿನಲ್ಲಿ ಡಿಜಿಇಟಿ ರವರು 26 ಸಂಸ್ಥೆಗಳನ್ನು ಉನ್ನತೀಕರಿಸಲು ಅನುಮೋದನೆಯನ್ನು ನೀಡಿರುತ್ತಾರೆ ಎಂದೂ, ಅಲ್ಲದೆ ಪ್ರತಿ ಸಂಸ್ಥೆಗೆ ರೂ. 2.50 ಕೋಟಿಯಂತೆ ಬಡ್ಡಿರಹಿತ ಸಾಲವನ್ನು ಐಎಂಸಿ ಹೆಸರಿನಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆಗೆ ಜಮಾ ಆಗಿರುತ್ತದೆ ಎಂದೂ, ಸದರಿ 26 ಸಂಸ್ಥೆಗಳನ್ನು ದಿನಾಂಕ 30/07/2008 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸ್ಟೇಟ್ ಸ್ಟೀರಿಂಗ್ ಕಮಿಟಿ ಸಭೆಯಲ್ಲಿ ಎಲ್ಲಾ 26 ಸಂಸ್ಥೆಗಳ ಹಾಗೂ ಎಂ.ಒ.ಯು/ಐ.ಡಿ.ಪಿ. ಗಳ ಅನುಮೋದನೆ ಯನ್ನು ಪಡೆಯಲಾಗಿದೆ ಎಂದೂ, ಆದಕಾರಣ 2008-09 ನೇ ಸಾಲಿನಲ್ಲಿ ಉನ್ನತೀಕರಿಸಲಾಗಿರುವ 26 ಸಂಸ್ಥೆಗಳಿಗೆ ಸೂಕ್ತ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕೋರಿರುವರು.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 268 ಇಟಿಐ 2009, ಬೆಂಗಳೂರು, ದಿನಾಂಕ: 16ನೇ ಸೆಪ್ಟೆಂಬರ್ 2009

2008-09ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಯೋಜನೆಯಾದ "ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ 1396 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಉನ್ನತೀಕರಣ" ಅಡಿಯಲ್ಲಿ ಡಿಜಿಇಟಿ ಯಿಂದ ಅನುಮೋದನೆಯಾಗಿರುವ 26 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಉನ್ನತೀಕರಿಸಲು ಮಂಜೂರಾತಿ ನೀಡಲಾಗಿದೆ. 26 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಹೆಸರನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

ಈ 26 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಐಎಂಸಿಯನ್ನು ರಚಿಸಲು ಹಾಗೂ ಇವನ್ನು ಸೊಸೈಟಿ ಕಾಯ್ದೆ ಅಡಿ ನೋಂದಾಯಿಸಲು ಮಂಜೂರಾತಿ ನೀಡಲಾಗಿದೆ. ಈ ಐಎಂಸಿಗಳಿಗೆ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರವನ್ನು ಸರ್ಕಾರಿ ಆದೇಶ ಸಂಖ್ಯೆ: ಕಾಇ 121 ಇಟಿಐ 2007 ದಿನಾಂಕ 04/03/2008 ರಲ್ಲಿ ನೀಡಿರುವಂತೆಯೇ ಪ್ರತ್ಯಾಯೋಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

ಎ.ಎಸ್. ವಿಶ್ವೇಶ್ವರಯ್ಯ,

ಪೀಠಾಧಿಕಾರಿ, ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ANNEXURE-I

UPGRADATION OF 1396 GOVT. ITIs THROUGH PUBLIC PRIVATE PARTNERSHIP TAKEN UP DURING 2008-09

Sl. No.	Name of the Govt. ITI	Name of the Principal (Division wise)	Name of the Industry Association	Name of the Industry Partner	Name of Chairman and Contact No
			BANGALORE DIVISION		
1	Bharmasagara	Mahabaleshwar B.S.	BCIC	M/s Silicon Micro Systems	Mr. Jayachandra Aradhya M.S Ph:080-22425830/31 Mob:98440 40444
2	Challakere	H.M. Zarifulla	CII	M/s Career Launcher	Mr. A.S. Holla Ph:41505590, 32925287 Mob:9886163784
3	Channagiri	Muralidhar T. Lamani	CII	M/s Career Launcher	Mr. A.S. Holla Ph:41505590, 32925287 Mob:9886163784
4	Pavgada	Sreenivasa R.	BCIC	M/s Kennametal India Limited	Mr. D. Sarathy, Ph:080-22198270 Mob:9845193750
5	Ramanagara	Meenakshi G.S.	CII	M/s Affordable Business Solutions	Mr. Srikant Rao, Ph: 91 80 41152760 Mob: 91 9845029010
			MYSORE DIVISION		
6	Arsikere	Ashwath Narayan	BCIC	M/s. KTwo Technologies Solutions Pvt. Ltd.	Mr. Arvind Padmanabhan, Ph:080-23144422 Mob:9845679324
7	Arakalgud	B.S. Giridhara Murthy	BCIC	M/s Hamshine Electronics	Mr.Hamsraj, Managing Director, Ph:08172-240233 Mob:9448140219
8	Belthangadi	Anantha Padmaraj	CII	M/s Affordable Business Solutions	Mr. Srikant Rao, Ph: 91 80 41152760 Mob:91 9845029010
9	K.M. Doddi	Lakshmirajaiah T.R.	CII	M/s BEML, Mysore	Mr. A.R.Krishna Reddy
10	Kadur	Shekarappa	CII	M/s Metro Cash & Carry	Mr.John Idicula Ph:22192021/22192000
11	Ponnampet (W)	Nagaraju P.K.	CII	M/s Karnataka Hybrid Micro Devices Ltd.,	Mr. E.S. Dwaraka Das Ph:28528594 Mob:9980019623
12	Kollegala	Gurumurthy	CII	M/s Career Launcher	A.S. Holla Ph:41505590, 32925287 Mob:9886163784
13	Vitla	Balakrishna A.	BCIC	M/s Shree Venkateshwara Processors	Sri P. Subraya Pai Ph: 08255-239278 Mob: 9448454244
14	Mysore-08	Gurumurthy	CII	M/s Velankani Information Systems Private Ltd.	Sri Kiron D.Shah Ph:080-66145894
			BELGAUM DIVISION		
15	Akki Alur	Savadatti Mutt	BCIC	M/s Forbes Campbell Knitwear	Mr. A.B.N.Patel Ph:0831-2418584
16	Beelagi	Rajput U.K.	CII	Career Launcher	Mr. Jayaram Krishnan Ph:41505590, 32925287 Mob:9740069637
17	Kalaghatagi	Nagarathna V.Kotur	BCIC	M/s KTwo Technologies Solutions Pvt. Ltd.,	Mr. Kiran Patil, Ph:080-23144422 Mob:9972304497
18	Nesargi	Revathi B.V.	CII	Career Launcher	Mr. Jayaram Krishnan Ph:41505590, 32925287 Mob:9740069637
19	Nippani	Khilare S.S.	CII	Career Launcher	Mr. Jayaram Krishnan Ph:41505590, 32925287 Mob:9740069637
20	Sadalaga	Chethana Hiremath	CII	M/s Ever Onn Systems India Ltd.,	Vinod M.M. Ph:9444397381
21	Savadatti	Madhav P. Kushtagi	CII	M/s Ever Onn Systems India Ltd.,	Vinod. M.M. Ph:9444397381
22	Gokak	Khilare S.S.	BCIC	M/s Gokak Mills	Mr. Raveesh Ph:08332 225004 Mob: 9448084999
23	Mundargi	Shivasharana	BCIC	M/s KTwo Technologies Solutions Pvt. Ltd.,	Mr. Ananth R.Koppar, Ph:080-23148981 Mob:9880160607
24	Mundagodu	Maskar M.A.	BCIC	M/s Ericson & Richards (Karwar/Goa)	Capt Eddie Viegas, Ph:0832-2511102 Mob:9422059665
25	Guttal	Narayankar P.M	BCIC	M/s Gokak Mills	Mr.Jitender Malik Ph:08332-225004 Email:jmalik@gokakmills.com
			GULBARGA DIVISION		
26	Lingasagur	Bheemanna	CII	M/s Ever Onn Systems India Ltd.,	Vinod. M.M. Ph:9444397381

ಪಿ.ಆರ್. 2327

ಎ.ಎಸ್. ವಿಶ್ವೇಶ್ವರಯ್ಯ
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ಶಿಕ್ಷಣ ಸಚಿವಾಲಯ

ವಿಷಯ: ಸರ್.ಎಂ. ವಿಶ್ವೇಶ್ವರಯ್ಯ ನಗರಸಭಾ ಅನುದಾನಿತ ಪ್ರಥಮ ದರ್ಜೆ ಸಂಜೆ ಕಾಲೇಜನ್ನು "ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು" ಎಂದು ಪರಿವರ್ತಿಸಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಬಗ್ಗೆ ಆದೇಶ.

ಓದಲಾಗಿದೆ: 1) ಚಿಕ್ಕಬಳ್ಳಾಪುರದ ನಗರಸಭೆಯ ಠರಾವು ದಿನಾಂಕ: 15–10–2003

2) ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ: ಕಾಶಿಆ/43/ಸರ್ಕಾರದ ವಶ (ಸಿವಿ–1) ಪಿಸಿಸಿ–1–2004 ದಿನಾಂಕ: 06–07–2007

3) ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ಪತ್ರ ಸಂಖ್ಯೆ: ಜಿನಕೋ.ಚಿ.ಸಿ(2) ಸಿಆರ್.80/07–08 ದಿನಾಂಕ: 18–02–2009

4) ನಗರಾಭಿವೃದ್ಧಿ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ನಅಇ–118–ಬಿಎಂಎಸ್–2007 ದಿನಾಂಕ:24–01–2009

5) ದಿನಾಂಕ: 11–11–2009ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯ

ಪ್ರಸ್ತಾವನೆ:

ಚಿಕ್ಕಬಳ್ಳಾಪುರ ಪುರಸಭೆಯು 1968ರಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದು, ಅದರಂತೆ ಸರ್.ಎಂ. ವಿಶ್ವೇಶ್ವರಯ್ಯ ಪುರಸಭಾ ಅನುದಾನಿತ ಪ್ರಥಮ ದರ್ಜೆ ಸಂಜೆ ಕಾಲೇಜನ್ನು 1968ರಲ್ಲಿ ಪುರಸಭಾ ಪ್ರಥಮ ದರ್ಜೆ ಹಗಲು ಕಾಲೇಜನ್ನು 1994ರಲ್ಲಿ ಫಾರ್ಮಸಿ ಕಾಲೇಜನ್ನು 1989ರಲ್ಲಿ ದೈಹಿಕ ಶಿಕ್ಷಣ ಕಾಲೇಜನ್ನು 2008ರಲ್ಲಿ ಬಿ.ಇಡಿ. ಕಾಲೇಜನ್ನು ಸರ್ಕಾರಕ್ಕೆ ವಹಿಸಿಕೊಡಲಾಗಿದೆ. ಮೇಲೆ (1)ರಲ್ಲಿ ಓದಲಾದ ದಿನಾಂಕ: 15–10–2003ರ ಠರಾವಿನಲ್ಲಿ ಸಂಜೆ ಕಾಲೇಜನ್ನು ಕಟ್ಟಡ ಸಮೇತ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂತೆ ಕೋರಿರುತ್ತಾರೆ. ಮೇಲೆ (2)ರಲ್ಲಿ ಓದಲಾದ ದಿನಾಂಕ: 06–07–2007ರ ಕಾಲೇಜು ಶಿಕ್ಷಣ ಆಯುಕ್ತರ ಪ್ರಸ್ತಾವನೆಯಲ್ಲಿ ಸದರಿ ಕಾಲೇಜಿನಲ್ಲಿ 7 ಜನ ಬೋಧಕರು ಮತ್ತು 15 ಜನ ಬೋಧಕೇತರರು ಕರ್ತವ್ಯ ನಿರ್ವಹಿಸುತ್ತಿದ್ದು, ಈ ಪೈಕಿ ಒಬ್ಬ ಪ್ರಾಂಶುಪಾಲರು ಗ್ರೇಡ್–1 ಹಾಗೂ 4 ಜನ ಬೋಧಕೇತರರಿಗೆ ಕಾಲೇಜು ಶಿಕ್ಷಣ ಇಲಾಖೆ ವೇತನ ಭರಿಸುತ್ತಿದ್ದು, ಉಳಿದ 6 ಮಂದಿ ಬೋಧಕ ಹಾಗೂ 11 ಮಂದಿ ಬೋಧಕೇತರ ವರ್ಗದವರಿಗೆ ನಗರಾಭಿವೃದ್ಧಿ ಇಲಾಖೆಯ ಎಸ್‌ಎಫ್‌ಸಿ ಅನುದಾನದಿಂದ ವೇತನ ಭರಿಸುತ್ತಿದೆ. ಕಾಲೇಜನ್ನು ಸರ್ಕಾರಕ್ಕೆ ವಹಿಸಿಕೊಂಡು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜನ್ನಾಗಿ ಪರಿವರ್ತಿಸಿದಲ್ಲಿ ಈ ಜಿಲ್ಲೆಯ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆಂದು ವರದಿ ಸಲ್ಲಿಸಿರುತ್ತಾರೆ. ಈ ಕಾಲೇಜಿನ ಪ್ರಾಂಗಣದ ಒಟ್ಟು ವಿಸ್ತೀರ್ಣ 1,07,991 ಚದರಡಿಗಳು, ಇದರಲ್ಲಿ ಸಂಜೆ ಕಾಲೇಜಿಗೆ ಸೇರಿದ ಕಟ್ಟಡ ಹಾಗೂ ನಿವೇಶನ 17,615 ಚದರ ಅಡಿ ಇರುತ್ತದೆ. ಈ ಹಿಂದೆ ಅಕ್ಟೋಬರ್ 1986ರಲ್ಲಿ ಸರ್ಕಾರವು ಹಗಲು ಕಾಲೇಜನ್ನು ತನ್ನ ವಶಕ್ಕೆ ತೆಗೆದುಕೊಂಡ ನಂತರ ಈ ಸ್ವತ್ತಿನ ಭಾಗವಾದ 90,376 ಚದರಡಿಗಳ ಕಟ್ಟಡ ಮತ್ತು ನಿವೇಶನವನ್ನು ಪೌರಾಡಳಿತ ನಿರ್ದೇಶನಾಲಯದ ಆದೇಶ ಸಂಖ್ಯೆ: ಪೌನಿ:ಸಿಬ್ಬಂದಿ:ಕೋಜಿ:ಸಿಆರ್23–98–99 ದಿನಾಂಕ: 19–09–2003ರಂತೆ ಸದರಿ ಕಟ್ಟಡದಲ್ಲಿ ಸಂಜೆ ಕಾಲೇಜನ್ನು ನಡೆಸುವ ಷರತ್ತಿಗೊಳಪಟ್ಟು ಕಾಲೇಜು ಶಿಕ್ಷಣ ಇಲಾಖೆಗೆ ಖಾತೆಯನ್ನು ವರ್ಗಾಯಿಸಿದೆ. ಆದಾಗ್ಯೂ ಈ ಕಟ್ಟಡ ಮತ್ತು ನಿವೇಶನದ ವರ್ಗಾವಣೆ, ದಾಖಲೆಗಳ ನೋಂದಣಿ ಇನ್ನೂ ಆಗಿರುವುದಿಲ್ಲ. ಸಂಜೆ ಕಾಲೇಜು ಮತ್ತು ಸಿಬ್ಬಂದಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಲ್ಲಿ ಮಾತ್ರ ಈ ಎಲ್ಲಾ ಸ್ವತ್ತನ್ನು ಸರ್ಕಾರದ ವಶಕ್ಕೆ ನೋಂದಣಿ ಮುಖೇನ ವರ್ಗಾಯಿಸಲಾಗುವುದೆಂದು ಮೇಲೆ (3)ರಲ್ಲಿ ಓದಲಾದ ದಿನಾಂಕ: 18–02–2009ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಪುರಸಭೆಯವರು ತಿಳಿಸಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ದಿನಾಂಕ: 24–01–2009ರ ಅನಧಿಕೃತ ಟಿಪ್ಪಣಿಯಲ್ಲಿ ನಗರಾಭಿವೃದ್ಧಿ ಇಲಾಖೆಯು ಚಿಕ್ಕಬಳ್ಳಾಪುರ ಜಿಲ್ಲಾಡಳಿತ, ಜಿಲ್ಲೆಗೆ ಅಗತ್ಯವಾದ ಪ್ರಥಮ ದರ್ಜೆ ಮಹಿಳಾ ಕಾಲೇಜನ್ನು ಪ್ರಾರಂಭಿಸುವಂತೆ ಮಾಡಿರುವ ಶಿಫಾರಸ್ಸಿನಂತೆ ಹಾಲಿ ನಗರಸಭಾ ಅನುದಾನಿತ ಪ್ರಥಮ ದರ್ಜೆ ಸಂಜೆ ಕಾಲೇಜನ್ನು ಮಹಿಳಾ ಕಾಲೇಜನ್ನಾಗಿ ಪರಿವರ್ತಿಸುವ ಷರತ್ತಿನೊಡನೆ ಈ ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ಕಾಲೇಜು ಶಿಕ್ಷಣ ಇಲಾಖೆಗೆ ಹಸ್ತಾಂತರಿಸಲು ಪೌರಾಡಳಿತ ನಿರ್ದೇಶಕರ ಅಭಿಪ್ರಾಯಕ್ಕೆ ನಗರಾಭಿವೃದ್ಧಿ ಇಲಾಖೆಯು ಸಹಮತಿಸಿದೆ. ದಿನಾಂಕ: 11–11–2009ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ಸಚಿವ ಸಂಪುಟವು ಅನುಮೋದಿಸಿದೆ. ಈ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರದ ನಗರಸಭಾ ಆಶ್ರಯದಲ್ಲಿ ನಡೆಸುತ್ತಿರುವ ಅನುದಾನಿತ ಸಂಜೆ ಕಾಲೇಜನ್ನು "ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು" ಎಂದು ಪರಿವರ್ತಿಸಿ ಸರ್ಕಾರದ ವಶಕ್ಕೆ ವಹಿಸಿಕೊಳ್ಳುವ ಬಗ್ಗೆ ಪರಿಶೀಲಿಸಿ ಕೆಲವು ಷರತ್ತುಗಳೊಂದಿಗೆ ಸದರಿ ಕಾಲೇಜನ್ನು ಸರ್ಕಾರದ ವಶಕ್ಕೆ ವಹಿಸಿಕೊಳ್ಳಲು ನಿರ್ಧರಿಸಿದೆ. ಆದುದರಿಂದ ಈ ಆದೇಶ.

ಆದೇಶ ಸಂಖ್ಯೆ : ಇಡಿ 147 ಯುಪಿಸಿ 2007 ಬೆಂಗಳೂರು, ದಿನಾಂಕ: 30ನೇ ನವೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರದ ನಗರಸಭೆಯ ಆಶ್ರಯದಲ್ಲಿ ನಡೆಸಲ್ಪಡುತ್ತಿರುವ ಸರ್.ಎಂ. ವಿಶ್ವೇಶ್ವರಯ್ಯ ನಗರಸಭೆ ಅನುದಾನಿತ ಪ್ರಥಮ ದರ್ಜೆ ಸಂಜೆ ಕಾಲೇಜನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ವಶಕ್ಕೆ ಪಡೆದುಕೊಂಡು ಇದನ್ನು ""ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು" ಎಂದು ಪರಿವರ್ತಿಸಲಾಗಿದೆ.

ಅ) ಚಿಕ್ಕಬಳ್ಳಾಪುರದ ನಗರ ಸಭೆಯು ಕಾನೂನು ರೀತ್ಯ ಸದರಿ ಸಂಜೆ ಕಾಲೇಜನ್ನು ಅದಕ್ಕೆ ಸೇರಿದ ಎಲ್ಲಾ ಚರ-ಚಿರಾಸ್ತಿಗಳನ್ನು ಸರ್ಕಾರದ ವಶಕ್ಕೆ ಹಸ್ತಾಂತರಿಸುವುದು.

ಆ) ಈ ಹಿಂದೆ ಅಕ್ಟೋಬರ್ 1986ರಲ್ಲಿ ಸರ್ಕಾರವು ಹಗಲು ಕಾಲೇಜನ್ನು ತನ್ನ ವಶಕ್ಕೆ ತೆಗೆದುಕೊಳ್ಳುವಾಗ ನಿರ್ಮಿಸಿರುವ ಕಾಲೇಜಿನ ಒಟ್ಟು ವಿಸ್ತೀರ್ಣದ ಕಟ್ಟಡ ತಮ್ಮ ನಿವೇಶನ ಅಲ್ಲದೇ ನಗರಾಭಿವೃದ್ಧಿ ಇಲಾಖೆ ಹಾಗೂ ಸಿಟಿ ಮುನ್ಸಿಪಲ್ ಕೌನ್ಸಿಲ್ ಕಾಲೇಜಿಗೆ ಸೇರಿದ ನಿವೇಶನ ವಿಸ್ತೀರ್ಣ 1,07,989 ಚದುರ ಅಡಿ ಮತ್ತು ಕಟ್ಟಡದ ವಿಸ್ತೀರ್ಣ 40,091 ಚದರ ಅಡಿ ಇವುಗಳನ್ನು ಯಾವ ಸ್ಥಿತಿಯಲ್ಲಿರುತ್ತವೆಯೋ ಅದೇ ಸ್ಥಿತಿಯಲ್ಲಿ ಕಾಲೇಜು ಶಿಕ್ಷಣ ಇಲಾಖೆಗೆ ಸಂಜೆ ಕಾಲೇಜನ್ನು ವರ್ಗಾಯಿಸತಕ್ಕದ್ದು.

ಇ) ಸದರಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 7 ಬೋಧಕರು (ಗ್ರೇಡ್-1 ಪ್ರಾಂಶುಪಾಲರು ಮತ್ತು 6 ಆಯ್ಕೆ ಶ್ರೇಣಿ ಉಪನ್ಯಾಸಕರು) ಹಾಗೂ 15 ಬೋಧಕೇತರ ಸಿಬ್ಬಂದಿ ವರ್ಗದವರನ್ನು ತಜ್ಞ ಸಮಿತಿಯವರಿಂದ ಸೂಕ್ತ ಪರಿಶೀಲನೆಯಾದ ನಂತರ ಈ ಬಗ್ಗೆ ವಿಶೇಷ ನಿಯಮಗಳನ್ನು ರಚಿಸಿ ಅರ್ಹ ಸಿಬ್ಬಂದಿಗಳ ಸೇವೆಯನ್ನು ಸರ್ಕಾರದ ಸೇವೆಯಲ್ಲಿ ವಿಲೀನಗೊಳಿಸಲಾಗುವುದು.

ಈ) ಸದರಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಅರ್ಹ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರನ್ನು ಸರ್ಕಾರ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸರ್ಕಾರಿ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸುವವರೆವಿಗೂ ಎಲ್ಲಾ ಸಿಬ್ಬಂದಿಯನ್ನು ಆಯಾ ಹುದ್ದೆಯಲ್ಲಿಯೇ ಮುಂದುವರೆಸುವುದು. ಹಾಗೂ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಸೇವಾ ಹಿರಿತನವನ್ನು ಮತ್ತು ವೇತನ ಶ್ರೇಣಿಯನ್ನು ಯಥಾವತ್ತಾಗಿ ಕಾಪಾಡಿಕೊಳ್ಳತಕ್ಕದ್ದು.

ಉ) ಚಿಕ್ಕಬಳ್ಳಾಪುರ ಪುರಸಭೆಯ ಆಶ್ರಯದಲ್ಲಿ ನಡೆಸುತ್ತಿರುವ ಈ ಸಂಜೆ ಕಾಲೇಜಿನ ಯಾವುದೇ ದಾಯಿತ್ವಕ್ಕೆ (liability) ಸರ್ಕಾರವು ಹೊಣೆಯಾಗಲಾರದು. ಹಾಗೂ ಸರ್ಕಾರವು ಸದರಿ ಕಾಲೇಜನ್ನು ತನ್ನ ವಶಕ್ಕೆ ತೆಗೆದುಕೊಂಡ ನಂತರ ಯಾವುದೇ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಅಥವಾ ಇನ್ನಿತರೆ ಕಾರಣಗಳ ಹಿನ್ನೆಲೆಯಲ್ಲಿ ದಾಯಿತ್ವದ ಬಗ್ಗೆ ಸಮಸ್ಯೆ ಉದ್ಭವವಾದಲ್ಲಿ ಕಾಲೇಜಿನ ಹಿಂದಿನ ಆಡಳಿತ ಮಂಡಳಿಯೇ ಹೊಣೆಯಾಗಿರತಕ್ಕದ್ದು.

ಊ) ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಾಗಿ ಪರಿವರ್ತನೆಗೊಂಡಿರುವ ಈ ಕಾಲೇಜಿನಲ್ಲಿ 2010-2011ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ಪದವಿ ತರಗತಿಗಳಿಗೆ ಮಹಿಳಾ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳತಕ್ಕದ್ದು.

ಸದರಿ ಕಾಲೇಜನ್ನು ಸರ್ಕಾರದ ವಶಕ್ಕೆ ಪಡೆದುಕೊಂಡ ನಂತರ ಚಿಕ್ಕಬಳ್ಳಾಪುರ ಪುರಸಭೆಯ ಅನುದಾನಿತ ಸಂಜೆ ಕಾಲೇಜಿನ ಸಮಸ್ತ ಕಟ್ಟಡ ಮತ್ತು ಇನ್ನಿತರ ಎಲ್ಲಾ ಮೂಲಭೂತ ಸೌಕರ್ಯವು ಸರ್ಕಾರದ ಮೂಲ ಮಾಲಿಕತ್ವಕ್ಕೆ ಬರಲಿದ್ದು, ಅವುಗಳನ್ನು ಶೈಕ್ಷಣಿಕ ಉದ್ದೇಶಗಳಿಗಾಗಿಯೇ ಉಪಯೋಗ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2828

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ವಿಷಯ: ಕು: ವೇದಾವತಿ ಎಸ್. ಅರ್ಥಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ರಿ ಇವರ ಹೆಸರು ಬದಲಾವಣೆ ಕುರಿತು.

ಓದಲಾಗಿದೆ: 1) ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ: ಕಾಶಿಇ:24/ಹೆಬ/2006/ಸಿಪಿ-2 ದಿನಾಂಕ: 12-12-2007 ಮತ್ತು 24-01-2009

2) ಸರ್ಕಾರಿ ಆದೇಶ ಸಂಖ್ಯೆ: ಇಡಿಎಆರ್:1:ಡಿಸಿಎನ್:66 ದಿನಾಂಕ: 08-03-1967.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಕಾಲೇಜು ಶಿಕ್ಷಣ ಆಯುಕ್ತರ ಪತ್ರಗಳಲ್ಲಿ ಕು: ವೇದಾವತಿ ಎಸ್. ಅರ್ಥಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ರಿ ಇವರು ತಮ್ಮ ಸ್ವಇಚ್ಛೆಯಿಂದ, ಇವರ ಹೆಸರನ್ನು ವೇದಶ್ರೀ ಸಿಡ್ಡ ಎಂದು ಬದಲಾಯಿಸಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿ ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಾಲೇಜು ಶಿಕ್ಷಣ ಆಯುಕ್ತರು ಒದಗಿಸಿರುತ್ತಾರೆ. ಮೇಲೆ (2)ರಲ್ಲಿ ಓದಲಾದ ದಿನಾಂಕ: 08–03–1967ರ ಸರ್ಕಾರಿ ಆದೇಶದಲ್ಲಿ ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಡಿ 292 ಡಿಸಿಇ 2009, ಬೆಂಗಳೂರು, ದಿನಾಂಕ: 30ನೇ ನವೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕು: ವೇದಾವತಿ ಎಸ್. ಅರ್ಥಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ರಿ ಇವರು ತಮ್ಮ ಸ್ವಇಚ್ಛೆಯಿಂದ, ಇವರ ಹೆಸರನ್ನು ವೇದಶ್ರೀ ಸಿಡ್ಡ ಎಂದು ಬದಲಾಯಿಸಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2829

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ENERGY SECRETARIAT

CORRIGENDUM No. EN 28 PSR 2009, Bangalore, Dated: 11th December 2009

The Words and figures **"Gratuity of Rs. 43833/-"** appearing in first para of the Preamble portion of the Government Order No. EN 28 PSR 2009 dated: 10-8-2009 shall be read as **"Gratuity of Rs. 45833/-"**

By Order and in the name of Governor of Karnataka

P.R. 2830

S.J. SAMPATH KUMAR

Under Secretary to Government, Energy Department.

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETARIAT

Sub: Approval of the project proposal of M/s Kemwell Pvt. Ltd., for manufacture of "Biopharmaceutical products and R&D centre" at Nelamangala Taluk, Bangalore Rural District.

Read: 1. Proceedings of the 18th State High Level Clearance Committee (SHLCC) meeting held on 21.6.2009.

2. Proceedings of the meeting held on 3.11.2009 under the Chairmanship of Principal Secretary to Govt. C&I Department.

Preamble:

M/s Kemwell Pvt. Ltd., has proposed to establish 100% EOU Biotech manufacturing facility for Biopharmaceutical products like Monoclonal antibody & Therapeutic proteins (0.05MT) and R&D in 7 acres 15 Guntas of own industrially converted land of T. Begur Village, Nelamangala, Bangalore Rural District in 7 acres 15 guntas of industrially converted own land at Sy Nos 46/1, 37/2, 37/3, 37/4, 37/5, 38/1, 38/2, 41/1, 41/2, 41/3, 42, 43, 46/2 of T Begur Village, Nelamangala, Bangalore Rural District. The project proposes to provide employment to about 200 persons and proposed to invest Rs.257 crores.

The Committee noted that this unit will be 100% export oriented unit. The proposed location is close to Tippagondanahalli reservoir. Therefore it was decided to accord approval in principle as the activity proposed is basically on R & D and 100% EOU. But approval will be subject to clearance by a Committee constituted for this purpose, chaired by Principal Secretary, Commerce & Industries Department. Members are Secretary, Ecology, Forest and Environment, M.D. BWSSB and Member Secretary KSPCB. Subsequently the project was given clearance in the meeting held on 3.11.2009 under the Chairmanship of Principal Secretary to Govt. C&I Department

After detailed discussions the State High Level Clearance Committee has approved in principle the proposal to establish "Biotech manufacturing facility for Biopharmaceutical products and R&D Centre" and recommended to grant infrastructure facilities. and extend incentives and concessions

In the meeting held under the chairmanship of Principal Secretary to Government, C&I Department vide proceedings read at (2) above the Committee has agreed to give formal clearance for the proposal subject to a condition that the company will implement the project as per KSPCB and environmental norms

Hence the following order

Government Order No. ITD 24 MDA 2009[1], Bangalore, Dated: 24th November 2009

In the circumstances explained in the Preamble, Government are pleased to accord approval to M/s Kemwell Pvt. Ltd to establish "Biotech manufacturing facility for Biopharmaceutical products and R&D Centre in 7 acres 15 Guntas has of own industrially converted land at T. Begur village, Nelamangala, Bangalore Rural District for the project. with an investment of Rs.257 crores subject to a condition that the company will implement the project as per KSPCB and environmental norms and extended the following infrastructure facilities, incentives and concessions.

INFRASTRUCTURE FACILITIES:

LAND: The Company is permitted to establish the project in 7 acres 15 guntas of industrially converted own land at Sy. Nos. 46/1, 37/2, 37/3, 37/4, 37/5, 38/1, 38/2, 41/1, 41/2, 41/3, 42, 43, 46/2 of T Begur Village, Nelamangala, Bangalore Rural District.

POWER: 5625 KVA to be serviced by BESCOM.

WATER: 0.2 MLD to be met out from borewells.

INCENTIVES & CONCESSIONS:

As applicable under Bio Tech Policy of the State.

Environment: The promoters to obtain CFE and CFO from KSPCB and Environmental Clearance from MOEF, GOI.

Employment: The Company shall prepare a plan for development of human resource required for the project, train local people and provide employment to these trained local youth and comply with Government policy of employment to local people. A copy of human resource development plan shall be sent to the Director of IT & Biotechnology for monitoring.

Social Infrastructure Development: The Company is advised to take up social infrastructure development projects in the vicinity of proposed location of the unit. A copy of such projects shall be sent to the Director of IT & Biotechnology for monitoring.

Vendor Development: Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Director of IT & Biotechnology for monitoring.

Social Infrastructure Development: The Company is advised to take up social infrastructure development projects in the vicinity of proposed location of the unit. A copy of such projects shall be sent to the Director of IT & Biotechnology for monitoring.

Others: The promoter shall take all statutory and other necessary clearances including GOI & shall submit milestones/progress in implementation of the project regularly, which will be monitored by the Departments concerned.

By Order and in the name of the Governor of Karnataka

M.V. KRISHNAMURTHY

Under Secretary to Government,

Department of Information Technology, Bio Technology and Science & Technology

P.R. 2658

Sub: Approval of the project proposal of M/s Larsen & Turbo Ltd . to establish IT/ITES SEZ" at Hebbal Hootagalli Industrial area, Mysore

Read: Proceedings of the 18th State High Level Clearance Committee (SHLCC) meeting held on 24.6.2009.

Preamble:

M/s Larsen & Turbo Ltd is a Public Limited Company incorporated under Indian Companies Act. The company operates through multiple divisions:

- Engineering & Construction Projects.
- Construction.
- Heavy Engineering.
- Electrical & Electronics.
- IT & Technology Services.
- Machinery & Industrial Products.

The L & T team comprises over 35000 people worldwide. The company's wide shareholder base exceeds 4 lakhs.

M/s Larsen & Turbo Ltd., has proposed to establish Sector specific SEZ for IT & ITES in 10 hectares (24.71 acres) Nos. 323, 324, 325, 326, 327, 328, 329, 330, 331, KIADB – Industrial Area, Hebbal- Hootagalli Industrial Area, Mysore District. The project proposes to provide employment to about 11000 persons and proposed to invest Rs.615 crores.

After detailed discussion, the State High Level Clearance Committee approved the proposal of the company to establish "Sector specific SEZ for IT & IT Enabled Services" at KIADB Industrial Area, Hebbal-Hootagalli Industrial Area, Mysore, and recommended to grant infrastructure facilities and extend incentives and concessions.

Hence the following order:

Government Order No. ITD 24 MDA 2009[2], Bangalore, Dated: 24th November 2009

In the circumstances explained in the Preamble, Government are pleased to accord approval to M/s Larsen & Turbo Ltd., to establish "Sector specific SEZ for IT & IT Enabled Services" at KIADB Industrial Area, Hebbal-Hootagalli Industrial Area, Mysore for the project, with an investment of Rs.615 crores and extended the following infrastructure facilities, incentives and concessions.

INFRASTRUCTURE FACILITIES:

LAND: To establish SEZ in 10 hectares (24.71 acres) of land owned by the company at Plot Nos 323, 324, 325, 326, 327, 328, 329, 330, 331, KIADB Industrial Area, Hebbal-Hootagalli Industrial Area, Mysore, Mysore District.

POWER: 11000 KVA Power to be serviced by CESCOM.

WATER: 0.5 MLD to be supplied by KIADB

INCENTIVES & CONCESSIONS:

As applicable under IT Policy of the State and as applicable under SEZ Policy of the State and of GOI.

Environment: The promoters to obtain CFE and CFO from KSPCB and Environmental Clearance from MOEF, GOI.

Employment: The Company shall prepare a plan for development of human resource required for the project, train local people and provide employment to these trained local youth and comply with Government policy of employment to local people. A copy of human resource development plan shall be sent to the Director of IT & Biotechnology for monitoring.

Social Infrastructure Development: The Company is advised to take up social infrastructure development projects in the vicinity of proposed location of the unit. A copy of such projects shall be sent to the Director of IT & Biotechnology for monitoring

Others: The promoter shall take all statutory and other necessary clearances including GOI & shall submit milestones/progress in implementation of the project regularly, which will be monitored by the Departments concerned

By Order and in the name of the Governor of Karnataka

M.V. KRISHNAMURTHY

P.R. 2659 Under Secretary to Government,

Department of Information Technology, Bio Technology and Science & Technology

Sub: Approval of the project proposal of M/s Chandra Developers Pvt. Ltd., to establish "IT/ITES Park" at Devanahalli Taluk, Bangalore Rural District.

Read: Proceedings of the 18th State High Level Clearance Committee (SHLCC) meeting held on 24.6.2009.

Preamble:

M/s Chandra Developer Pvt. Ltd. is a Private Limited Company incorporated under Indian Companies Act. 1956, on 18th August, 1997, in Bangalore.

M/s Chandra Developer Pvt. Ltd is a flagship company of Bagmane Group, Bagmane Group has developd a modern tech park in 52 acres of land at C.V. Raman Nagar, Bangalore. This tech park houses many reputed companies such as Motorola, Texas Instruments, iflex, Dell, Samsung, Volvo, Mphasis, Cognizant Technologies, HP and many other software companies. This software park is one of the most prestigious technology center in Karnataka.

At present Bagmane Group is developing an SEZ at Ring road, Mahadevapura, Bangalore with a total built-up area of about 7 Million sq.ft.

M/s Chandra Developer Pvt. Ltd., has proposed to establish IT/ITES Park in 25 acres of land, in KIADB Industrial Area, near Bangalore International Airport, Devanahalli Taluk, Bangalore Rural District. The project proposes to provide employment to about 39400 persons and proposed to invest Rs. 459.98 crores.

After detailed discussions, the State High Level Clearance Committee in its 18th meeting held on 24.6.2009, approved the proposal of the company to establish an "IT/ITES Park" at KIADB Industrial Area, near Bangalore International Airport, Devanahalli Taluk, Bangalore Rural District and recommended to grant infrastructure facilities and extend incentives and concessions.

Hence the following order:

Government Order No. ITD 24 MDA 2009[3], Bangalore, Dated: 24th November 2009

In the circumstances explained in the Preamble, Government are pleased to accord approval to M/s Chandra Developer Pvt. Ltd. to establish an "IT/ITES Park" at 25 acres of land in KIADB Industrial Area, near Bangalore International Airport, Devanahalli Taluk, Bangalore Rural District with an investment of Rs.459.98 crores and extended the following infrastructure facilities, incentives and concessions.

INFRASTRUCTURE FACILITIES:

LAND: KIADB to allot 25 acres of land at KIADB Indusrial Area, near Bangalore International Airport, Devanahalli Taluk, Bangalore Rural District.

POWER: 30000 KVA Power to be serviced by BESCOM.

WATER: The Committee noted the requirement of water for the project.

which is as below

- 0.81 MLD to be supplied by KIADB
- 0.41 MLD from borewells
- 0.41 MLD from recycled water

INCENTIVES & CONCESSIONS:

As applicable under Millennium IT Policy of the State.

Environment: The promoters to obtain CFE and CFO from KSPCB and Environmental Clearance from MOEF, GOI.

Employment: The Company shall prepare a plan for development of human resource required for the project, train local people and provide employment to these trained local youth and comply with Dr. Sarojini Mahishi report in employment to local people. A Copy of human resource development plan shall be sent to the Director of IT & Biotechnology for monitoring.

Social Infrastructure Development: The Company is advised to take up social infrastructure development projects in the vicinity of proposed location of the unit. A copy of such projects shall be sent to the Director of IT & Biotechnology for monitoring.

Others: The promoter shall take all statutory and other necessary clearances including GOI & shall submit milestones/progress in implementation of the project regularly, which will be monitored by the Departments concerned.

By Order and in the name of the Governor of Karnataka

M.V. KRISHNAMURTHY

P.R. 2660

Under Secretary to Government,

Department of Information Technology, Bio Technology and Science & Technology

ಇಂಧನ ಸಚಿವಾಲಯ

ವಿಷಯ: ಮೆ:: ಶ್ರೀವೆನ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: 1 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಹೆಗ್ಗಡಹಳ್ಳಿ ಎಂಹೆಚ್‌ಎಸ್/09/2997 ದಿನಾಂಕ: 10/11.09.2009.

2 ದಿನಾಂಕ: 23.10.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಶ್ರೀವೆನ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಹೆಗ್ಗಡಹಳ್ಳಿ ಗ್ರಾಮದ ಬಳಿ ಲೋಕಪಾವನಿ ನದಿಗೆ ಅಡ್ಡಲಾಗಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಡವಳಿಯ ಪ್ರಕಾರ ದಿನಾಂಕ : 23.10.2009 ರಂದು ಜರುಗಿದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ :: ಶ್ರೀವೆನ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ: ಇಎನ್ 490 ಎನ್‌ಸಿಇ 2009, ಬೆಂಗಳೂರು, ದಿನಾಂಕ: 15ನೇ ಡಿಸೆಂಬರ್ 2009

ಮೆ:: ಶ್ರೀವೆನ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಹೆಗ್ಗಡಹಳ್ಳಿ ಗ್ರಾಮದ ಬಳಿ ಲೋಕಪಾವನಿ ನದಿಗೆ ಅಡ್ಡಲಾಗಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು

(Latitude 12°34'20" N Longitude 76°44'08" E WEIR and Power House Latitude 12°32'18" N Longitude 76°43'36" E) ಈ ಕೆಳಗಿನ ಷರತ್ತುಗಳಿಗೊಳಪಟ್ಟು ಹಂಚಿಕೆ ಮಾಡಲಾಗಿದೆ:-

1(ಅ) ಪವರ್ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಷಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4 ಫೈನಾನ್ಷಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5 ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6 ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7 ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರೂ ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

"SEZ for IT/ITES", with an investment of Rs.506.90 crores, in Kannamangala and Udayagiri Villages, Kasaba Hobli, Devanahalli Taluk, Bangalore Rural District and recommended to KIADB, to acquire and allot 112 acres of land, on consent, in various Sy. Nos. of the above villages, for the project.

Accordingly, Government have issued the Government Order read at [2] above.

In the meanwhile, M/s Brigade Hospitality Services Pvt. Ltd., Bangalore has submitted an application seeking SLSWCC clearance to establish a "5 Star Hotel" in 2.24 acres of land, at Sy.No.47/2 of Udayagiri Village, owned by Mr M R Jaishankar, one of the director of the company. The said land is part of the land recommended by SHLCC for acquisition and allotment to M/s Blue Hill Informatics Pvt. Ltd. The subject was discussed in 39th SLSWCC meeting held on 21.1.2008 and it was decided to discuss the issue with M/s Blue Hill Informatics Pvt. Ltd., in the Screening Committee

Accordingly, the issue was discussed with M/s Blue Hill Informatics Pvt. Ltd., in the 142nd, 143rd and 144th Screening Committee meeting.

The representative of M/s Blue Hill Informatics Pvt. Ltd., informed the Committee that, 2.24 acres of land, at Sy.No.47/2 of Udayagiri Village may be excluded from their project area and M/s Brigade Hospitality Services Pvt. Ltd., may be permitted to establish their project as these lands are in the periphery of their project area.

The Committee noted the details of the proposed amendment and approved the amendment required.

Hence the following order:

Government Order No. ITD 31 MDA 2009[4], Bangalore, Dated: 7th December 2009

In the circumstances explained in the Preamble, Government are pleased to partially modify the G.O. read at [2] above to amend the project area of the proposal of M/s Blue Hill Informatics Pvt. Ltd., to establish IT/ITES-SEZ' in "109.16 acres" as against "112 acres" approved earlier by excluding 2.24 acres of land at Sy. No. 47/2 of Udayagiri Village from the project area.

By Order and in the name of the Governor of Karnataka

M.V. KRISHNAMURTHY

Under Secretary to Government,

Department of Information Technology, Bio Technology and Science & Technology

Sub: Approval of the project proposal of M/s RANKA AND SHAH DEVELOPERS PVT. LTD. to Establish "SEZ FOR IT/ITES" At Hunchur Village, Jala Hobli, Bangalore Urban District.

Read: Proceedings of 17th State High Level Clearance Committee (SHLCC) meeting held on 28.1.2009.

Preamble:

M/s Ranka and Shah Developers Pvt. Ltd., is a Private Limited Company incorporated under Indian Companies Act, 1956, registered with Registrar of Companies, Bangalore on 4th April 1996.

The RANKA group is a Bangalore based conglomerate with interests in real estate development, infrastructure projects, power generation, retailing contracting and engineering & consultancy, interior housing finance, Infotech solutions, education, Healthcare, hospitality, leisure and entertainment, jewellery, textiles and silks – drawing synergy from the diversity.

RANKA group is one of the renowned groups in the field of property development since the 70's. The company has developed over 30 projects in Bangalore and has over clientele over 2500 satisfied Ranka Home Owners, of which over 1000 are NRIs.

In the proposal submitted for the 17th SHLCC the Company had requested to approve the project for establishment of "SEZ for IT/ITES" in 33 acres 31 guntas of own land and for allotment of said land through KIADB after payment of required development charges. The project proposes to provide employment to about 7000 persons and proposed to invest Rs. 430.00 crores.

The Company informed the committee that out of 33 acres 31 guntas, the land measuring 26 acres 01 guntas is registered in the name of the company and also converted into residential purpose from agricultural during 2005. The remaining 7 acres 30 guntas has been registered in the name of Mr. Pradeep Ranka, one of the promoters Director of the company.

It has been informed to the committee that a Court case is pending in the Hon'ble High Court on the said property. The promoters have approached the Court against the acquisition by KIADB and STATUS-QUO granted by the Hon'ble High Court against the acquisition. BIAPPA have informed that the proposed lands are in Special Agriculture Zone as per Interim Master Plan of BIAPPA and hence the proposed activity is not permitted.

KIADB in their letter dated 26.3.2008 has informed that the extent of one acre 34 guntas in Sy.No. 116 of Hunchur village is not under KIADB acquisition process and remaining extent of land is under acquisition and the Hon'ble High Court has given a stay and ordered for STATUS-QUO.

The Company in their letter 30.10.2008 has submitted before the Committee the following points and requested the committee to approve the proposal.

1. The Company will consider withdrawing their writ petition before the Honorable High Court of Karnataka, in case the Government agrees to approve the application for SEZ in the said land by payment of development fees to KIADB.
2. Requested to approve the projet proposal subject to obtaining of environmental clearance so that to enable the Company to approach the Government of India for obtaining approval of SEZ (as it takes nearly 3 to 6 months).
3. The above said proposed land has been already converted for residential purposes and has obtained clearance from pollution control board for setting up of SEZ for IT/ITES.

Maps of the lands involved in this project as well as KIADB Aerospace layout were perused by the Committee. The Committee observed that the project proponent may be given an extent of 33 acres 31 guntas of land in the KIADB layout for IT sector at Devanahalli. The project proponent should pay development charges for this land. The committee has indicated that it is difficult to allot the same land as requested by the project proponent within the layout because the layout is already designed. The project proponent agreed for the same. The Committee noted that land acquired by KIADB will be for industrial use. Hence, the issue of present zoning will not be relevant.

The Committee observed that water can be supplied to the project only after 2012. The project proponents informed that implementation of the project would take about 3 years and hence it is acceptable if water is made available after 2012.

The Committee also noted that the project proponent will withdraw the Writ Petition he has filed against the acquisition.

Considering the above points the committee after detailed discussions, approved the proposal to establish "IT/ITES SEZ" and recommended to grant infrastructure facilities and extend incentives and concessions.

Hence the following order.

Government Order No. ITD 31 MDA 2009[5], Bangalore, Dated: 7th December 2009

In the circumstances explained in the Preamble, Government are pleased to accord approval to M/s Ranka and Shah Developers Pvt. Ltd., establish "IT/ITES SEZ. at KIADB layout for IT Sector at Devanahalli with an investment of Rs 430 crores and extended the following infrastructure facilities. incentives and concessions.

INFRASTRUCTURE FACILITIES:

LAND: The Committee resolved to permit the company to establish the unit in 33 acres 31 guntas of land to be allotted by KIADB in the layout for IT sector at Devanahalli in lieu of the land he will surrender to KIADB. The project proponent shall pay development charges to KIADB for the same.

POWER: 10 MW to be serviced by BESCOM.

WATER: 3,50,000 lpd of water to be supplied by KIADB/BWSSB by 2012.

INCENTIVES & CONCESSIONS:

As per Millennium IT Policy

Environment: The promoters to obtain CFE and CFO from KSPCB and Environmental Clearance from State. No works shall commence prior to obtaining EC, as per prevailing law.

Employment: The Company shall prepare a plan for development of human resource required for the project, train local people and provide employment to these trained local youth and comply with Government policy of employment to local people. A copy of human resource development plan shall be sent to the Director Dept of IT & BT for monitoring.

Others: The promoter shall take all statutory and other necessary clearances including GOI and shall submit milestones/progress in implementation of the project regularly, which will be monitored by the Departments concerned.

By Order and in the name of Governor of Karnataka

M.V. KRISHNAMURTHY

P.R. 2839

Under Secretary to Government,

Department of Information Technology, Bio Technology and Science & Technology

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಕೊಂಡಜ್ಜಿ ಬಳಿ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ:

1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಆದೇಶ ಸಂಖ್ಯೆ: 1068 ದಿನಾಂಕ:27.8.2009.
2. ದಿನಾಂಕ 03.10.2009ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ:ಮುಸದ/ತಾಂ.4/ಸಇಂ.10/ದಾವಣಗೆರೆ /ಹರಿಹರ/ಕೊಂಡಜ್ಜಿ/ಹಳ್ಳ/ಚೆಕ್‌ಡ್ಯಾಂ/2009/ 3872
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರು ರವರ ದಿನಾಂಕ 21.10.2009ರ ಪತ್ರ ಸಂಖ್ಯೆ: ಮುಸದ/ಆಪ್ರಶಾಖೆ/ಟೆಂಡರ್/08-09/3055.

ಪ್ರಸ್ತಾವನೆ:

ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಕೊಂಡಜ್ಜಿ ಬಳಿ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಯ 13.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 27.08.2009ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಚಿತ್ರದುರ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ದಾವಣಗೆರೆ ಜಿಲ್ಲಾ ಟೆಂಡರ್ ಬುಲೆಟಿನ್	13.02.2009
2	ಪ್ರಜಾವಾಣಿ ದಿನ ಪತ್ರಿಕೆ	13.02.2009
3	ಉದಯವಾಣಿ ದಿನ ಪತ್ರಿಕೆ	13.02.2009

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಖಾಲಿ ಟೆಂಡರ್ ಫಾರಂ ಪಡೆದ 6 ಜನ ಗುತ್ತಿಗೆದಾರರ ಪೈಕಿ ನಿಗದಿತ ದಿನದಂದು ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರುಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ಟೆಂಡರುಗಳನ್ನು ದಿನಾಂಕ 07/07/09ರಂದು ತೆರೆಯಲಾಗಿದೆ. ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ 12,91,978/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ	ರೂ 12,63,651/-

ಕ್ರ.ಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ ರೂ.	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಒ.ವೀರಭದ್ರಪ್ಪ, 1ನೇ ದರ್ಜೆ ಗುತ್ತಿಗೆದಾರರು	15,29,780/-	18.40 ಹೆಚ್ಚು	21.06 ಹೆಚ್ಚು
2	ಆರ್. ವಿರುಪಾಕ್ಷಪ್ಪ, 1ನೇ ದರ್ಜೆ ಗುತ್ತಿಗೆದಾರರು	16,66,247/-	28.96 ಹೆಚ್ಚು	31.85 ಹೆಚ್ಚು

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ ಒ.ವೀರಭದ್ರಪ್ಪ 1ನೇ ದರ್ಜೆ ಗುತ್ತಿಗೆದಾರರು ಅತಿ ಕಡಿಮೆ ದರ ನೀಡಿರುವ ಟೆಂಡರ್‌ದಾರರಾಗಿದ್ದು ಇವರು ನಮೂದಿಸಿರುವ ಮೊತ್ತ ರೂ. 15,29,780/-ಗಳಾಗಿದ್ದು ಇವರು ಟೆಂಡರಿನಲ್ಲಿ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 21.06 ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 20/10/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 12,63,651/-ಗಳ ಮೇಲೆ ಶೇಕಡ 12.000ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 14,15,289/- ಗಳಿಗೆ ಕಾಮಗಾರಿಯನ್ನು ಶ್ರೀ ಒ.ವೀರಭದ್ರಪ್ಪ 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 72 ಅಪಿಬಿಂ 2009, ಬೆಂಗಳೂರು, ದಿನಾಂಕ: 29ನೇ ಅಕ್ಟೋಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಕೊಂಡಜ್ಜಿ ಬಳಿ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 12,63,651/-ಗಳ ಮೇಲೆ ಶೇಕಡ 12.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 14,15,289/- ಗಳಿಗೆ (ಹದಿನಾಲ್ಕು ಲಕ್ಷದ ಹದಿನೈದು ಸಾವಿರದ ಇನ್ನೂರ ಎಂಬತ್ತೊಂಬತ್ತು ರೂ.ಗಳು ಮಾತ್ರ) ಶ್ರೀ ಒ.ವೀರಭದ್ರಪ್ಪ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರವನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಸುಧಾಕರ ಶೆಟ್ಟಿ

ಪಿ.ಆರ್. 2602 ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಿಷಯ: ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು, ದಿನಸಿಕುರನೂರು ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 11/10/07ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/ 2006-07/5067.

ಪ್ರಸ್ತಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು, ದಿನಸಿಕುರುನೂರು ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 03/02/1983.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 26/11/1983.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಗುಲ್ಬರ್ಗಾದ ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ:ಲಾ 2387 ಎಲ್‌ಎಸ್‌ಪಿ 2005, ದಿನಾಂಕ 23/02/06ರಲ್ಲಿ ಅಭಿಪ್ರಾಯ ನೀಡಿದೆ. ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ. ಸಂ	ಎಲ್‌ಎಸಿ ಸಂಖ್ಯೆ	ದಿನಸಿಕುರುನೂರ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	197/01	15/2	5-00	320806
2	196/01	14	6-00	384907
	ಒಟ್ಟು			**705713**

- **ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.**

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 251 ಭೂಸ್ವಾಪ್ರ 2006, ಬೆಂಗಳೂರು, ದಿನಾಂಕ 16ನೇ ಡಿಸೆಂಬರ್ 2009

ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು, ದಿನಸಿಕುರುನೂರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ದಿನಸಿಕುರುನೂರ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್‌ನ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.7,05,713-00 ಗಳನ್ನು (ಏಳು ಲಕ್ಷದ ಐದು ಸಾವಿರದ ಏಳುನೂರ ಹದಿಮೂರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಸುಧಾಕರ ಶೆಟ್ಟಿ

ಪಿ.ಆರ್. 2870 ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ: ಸಣ್ಣ ನೀರಾವರಿ ಇಲಾಖೆಗೆ ಸೇರಿದ ಬೆಂಗಳೂರು ನಗರ ಜಿಲ್ಲೆಯ ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ: ಪತ್ರ ಸಂಖ್ಯೆ:ಮುಸದ/ತಾಂ-1/ಸಇಂ-1/ಕೆರೆಗಳ ಹಸ್ತಾಂತರ/2009/3879, ದಿನಾಂಕ:05.10.2009.

ಪ್ರಸ್ತಾವನೆ:

ದಿನಾಂಕ:24.08.2009ರಂದು ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಜೀವಂತ ಕೆರೆಗಳ ಪುನರುಜ್ಜೀವನಗೊಳಿಸಲು ನಡೆದ ಸಭೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ ಅಭಿವೃದ್ಧಿಪಡಿಸುವ ಸಲುವಾಗಿ ಹಸ್ತಾಂತರಿಸಲು ತೀರ್ಮಾನಿಸಿರುವ ಮೇರೆಗೆ ಸಣ್ಣ ನೀರಾವರಿ ಇಲಾಖೆಯ ಒಟ್ಟು 05 ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ ಅಭಿವೃದ್ಧಿಪಡಿಸುವ ಸಲುವಾಗಿ ಹಸ್ತಾಂತರಿಸುವ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ದಕ್ಷಿಣ ವಲಯ, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂ:ಸನೀಇ 218 ಮಸಾವಿ 2009, ಬೆಂಗಳೂರು, ದಿನಾಂಕ: 7ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಮೇರೆಗೆ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ 05 ಕೆರೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಸ್ತಾಂತರಿಸಲು ಅನುಮೋದನೆ ನೀಡಿದೆ:

1. ಬೆಂಗಳೂರು ನಗರ ಪೂರ್ವ ತಾಲ್ಲೂಕು, ಗುಂಜೂರು ಕೆರೆ
2. ಬೆಂಗಳೂರು ನಗರ ಉತ್ತರ ತಾಲ್ಲೂಕು, ದೊಡ್ಡಬಿದರಕಲ್ಲು ಕೆರೆ
3. ಬೆಂಗಳೂರು ನಗರ ದಕ್ಷಿಣ ತಾಲ್ಲೂಕು, ಎಲ್ಲೇನಹಳ್ಳಿ ಕೆರೆ
4. ಬೆಂಗಳೂರು ನಗರ ದಕ್ಷಿಣ ತಾಲ್ಲೂಕು, ಬೇಗೂರು ಕೆರೆ
5. ಬೆಂಗಳೂರು ನಗರ ದಕ್ಷಿಣ ತಾಲ್ಲೂಕು, ನಾಗನಾಯಕನ ಕೆರೆ

ಮೇಲ್ಕಂಡ ಕೆರೆಗಳನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ:

1) ಹಾಲಿ ಇರುವ ಕೆರೆಯ ಅಚ್ಚುಕಟ್ಟುದಾರರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು;

2) ಕೆರೆಯ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವಾಗ ಕೆರೆಯ ಏರಿ, ತೂಬು, ಕೋಡಿಯ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ವಿನ್ಯಾಸ ಮತ್ತು ಮಾರ್ಪಾಟುಗಳ ಕಾರ್ಯನಿರ್ವಹಿಸುವುದು;

3) ಕಾಲಕಾಲಕ್ಕೆ ಅಭಿವೃದ್ದಿ ಕಾಮಗಾರಿಗಳನ್ನು ನಿರ್ವಹಿಸುವುದು;

4) ಕೆರೆಯ ಹೂಳನ್ನು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ನಿಗದಿತ ಆಳಕ್ಕೆ ತೆಗೆದು ಅಭಿವೃದ್ಧಿಪಡಿಸುವುದು;

5) ಕೆರೆಯ ಅಂಗಳಕ್ಕೆ ಸಾರ್ವಜನಿಕರ ಭೇಟಿಗೆ ಯಾವುದೇ ನಿರ್ಬಂಧವನ್ನು ವಿಧಿಸಬಾರದು:

6) ಕೆರೆಯ ವ್ಯಾಪ್ತಿಯ ನೀರಾವರಿ ಪ್ರದೇಶಕ್ಕೆ ಹಾಗೂ ನೀರಾವರಿಗೆ ಯಾವುದೇ ಅಡೆತಡೆ ಉಂಟಾಗದಂತೆ ಹಾಲಿ ಇರುವ ಕಾಲುವೆಗಳನ್ನು ಸುಸ್ಥಿತಿಯಲ್ಲಿ ನಿರ್ವಹಿಸುವುದು:

7) ಕೆರೆಯನ್ನು ಯಾವುದೇ ಆರ್ಥಿಕ ಲಾಭಕ್ಕೆ ಬಳಸಿಕೊಳ್ಳಬಾರದು.

8) ಈ ಕೆರೆಯ ಮೂಲ ಸ್ವರೂಪಕ್ಕೆ ಧಕ್ಕೆಯಾವಲ್ಲಿ ಅದರ ವೆಚ್ಚವನ್ನು ಭರಿಸತಕ್ಕದ್ದು;

9) ಒಂದು ವೇಳೆ ಒತ್ತುವರಿಗಳಾಗಿದ್ದಲ್ಲಿ, ಒತ್ತುವರಿಯನ್ನು ತಡೆಗಟ್ಟಲು ಹಾಗೂ ತೆರವುಗೊಳಿಸಲು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯವರು ಕಾನೂನು ಕ್ರಮ ತೆಗೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2781

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಿಷಯ: ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಅಂತರವಳ್ಳಿ ಹೊಸಕೆರೆ ನಿರ್ಮಾಣ (ಬಾಕಿ ಕಾಮಗಾರಿ) ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸನೀಇ 28 ಮಸಾವಿ 2002 ದಿನಾಂಕ 31.03.2001

2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ:ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-3/2009-10/5136 ದಿನಾಂಕ 28.08.2009

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರು ರವರ ದಿನಾಂಕ 21.10.2009ರ ಪತ್ರ ಸಂಖ್ಯೆ: ಮುಸದ/ ಆಪ್ತಶಾಖೆ/ ಟೆಂಡರ್/ 08-09/3055.

ಪ್ರಸ್ತಾವನೆ:

ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಅಂತರವಳ್ಳಿ ಹೊಸಕೆರೆ ನಿರ್ಮಾಣ (ಬಾಕಿ ಕಾಮಗಾರಿ) ಕಾಮಗಾರಿಯ 248.00ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 05.02.2009ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯ ಪತ್ರ	08.01.2009
ರಾಜ್ಯ ಟೆಂಡರ್ ಬುಲೆಟಿನ್	06.04.2009
ಜಿಲ್ಲಾ ಟೆಂಡರ್ ಬುಲೆಟಿನ್	03.01.2009
ದಿ ಹಿಂದೂ ಆಂಗ್ಲ ದಿನ ಪತ್ರಿಕೆ	07.01.2009
ವಿಜಯ ಕರ್ನಾಟಕ ದಿನಪತ್ರಿಕೆ	07.01.2009
ಸಂಯುಕ್ತ ಕರ್ನಾಟಕ ದಿನಪತ್ರಿಕೆ	08.01.2009

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ 6 ಜನ ಗುತ್ತಿಗೆದಾರರು ಖಾಲಿ ಟೆಂಡರ್ ಫಾರಂ ಪಡೆದು ಇಬ್ಬರು ಗುತ್ತಿಗೆದಾರರು ಮಾತ್ರ ನಿಗದಿತ ದಿನದಂದು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ಟೆಂಡರ್‌ಅನ್ನು ದಿನಾಂಕ 19.06.2009 ರಂದು ತೆರೆಯಲಾಗಿದೆ. ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ 1,78,04,504/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ 3,45,07,463/-

ಕ್ರಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಎ.ಪಿ.ಆರ್. ಕನಸ್ಟ್ರಕ್ಷನ್ಸ್ ಲಿ., ಹೈದ್ರಾಬಾದ್.	5,47,57,635/-	207.55 ಹೆಚ್ಚು	58.67 ಹೆಚ್ಚು
2	ಗೋಕುಲ ಶೆಟ್ಟಿ, ಒಂದನೇ ದರ್ಜೆ ಗುತ್ತಿಗೆದಾರರು	6,29,60,683/-	253.62 ಹೆಚ್ಚು	82.44 ಹೆಚ್ಚು

ಮೇಲ್ಕಂಡಂತೆ ಕ.ಸಂ:1ರಲ್ಲಿರುವ ಮೆ. ಎ.ಪಿ.ಆರ್. ಕನ್‌ಸ್ಟ್ರಕ್ಷನ್ ಲಿ., ಹೈದ್ರಾಬಾದ್., 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿದ ದರಗಳನ್ನು ಸಂಧಾನ ಮಾಡಿ ಅನುಮೋದಿಸಲು ಮುಖ್ಯ ಇಂಜಿನಿಯರ್ ರವರು ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ನೀಡಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 20/10/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 3,45,07,463/–ಗಳ ಮೇಲೆ ಶೇಕಡ 12.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.3,88,20,896/–ಗಳಿಗೆ ಕಾಮಗಾರಿಯನ್ನು ಮೆ. ಎ.ಪಿ.ಆರ್. ಕನ್‌ಸ್ಟ್ರಕ್ಷನ್ ಲಿ., ಹೈದ್ರಾಬಾದ್, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 16 ಹೊಕೆನಿ 2009, ಬೆಂಗಳೂರು, ದಿನಾಂಕ: 29ನೇ ಅಕ್ಟೋಬರ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಅಂತರವಳ್ಳಿ ಹೊಸಕೆರೆ ನಿರ್ಮಾಣ (ಬಾಕಿ ಕಾಮಗಾರಿ) ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 3,45,07,463/–ಗಳ ಮೇಲೆ ಶೇಕಡ 12.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.3,88,20,896/–ಗಳಿಗೆ (ಮೂರು ಕೋಟಿ ಎಂಬತ್ತೆಂಟು ಲಕ್ಷದ ಇಪ್ಪತ್ತು ಸಾವಿರದ ಎಂಟುನೂರ ತೊಂಬತ್ತಾರು ರೂ.ಗಳು ಮಾತ್ರ) ಮೆ. ಎ.ಪಿ.ಆರ್. ಕನ್‌ಸ್ಟ್ರಕ್ಷನ್ ಲಿ., ಹೈದ್ರಾಬಾದ್, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2783

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

COMMERCE AND INDUSTRIES SECRETARIAT

Sub: The Project Proposal of M/s Nirani Sugars to increase the capacity of Sugar Manufacturing from 5000 TCD to 10000 TCD with 62 MW Power Generation Plant – Acquire and Allot 29 acres, 16 Guntas of land by KIADB – approval for order – reg.

Read:
1. Govt. Order No. CI 270 SGF 07 Dt: 16.03.2009
2. Proceedings of the 18th State High Level Clearance Committee (SHLCC) meeting held on 24.06.2009.
3. Govt. Order No. CI 233 SPI 2009 Dt: 07.11.2009.

Preamble:

The State High Level Clearance Committee in its 8th meeting held on 23.02.2007 has approved the project proposal of M/s Nirani Sugars Ltd Mudhol, Bagalkot District to increase the capacity of sugar manufacturing from 2500 TCD to 5000 TCD with 30 MW power Generation plant with an invest of Rs.202.80 crores.

Further, Commerce & Industries Department has issued G.O.NO CI 270 SGF 2007 Bangalore dated 16.03.2009 to increase the sugar cane crushing capacity from 5000 TCD to 10000 TCD, subject to

the condition that the said industry should develop the additional requirement of cane in the areas already reserved for the cane development and the factory should not request for additional reserve area for cane development & also to abide Hon'ble Supreme Court decision on pending Writ Petition No.8492/2008

The enhancement of crushing capacity from 5000 TCD to 10000 TCD was not been reflected in the order portion of Govt. Order dated 07.11.2009 read above at (3)

Hence the following order

Government Order No: CI 233 SPI 2009, Bangalore, Dated: 18th November 2009

Government is pleased to accord approval for the proposal of M/s Nirani Sugars Ltd., Mudhol, Bagalkot District to increase the capacity of sugar manufacturing from 5000 TCD to 10000 TCD, subject to the conditions imposed in the Govt. Order read above at (1) and also co-generation of power from 30 MW to 62 MW and extend the following infrastructure facilities, incentives and concessions.

INFRASTRUCTURE FACILITIES:

1. Land: KIADB to acquire and allot 29 acres 16 guntas of land at various Sy.Nos. of Mudhol Village, Bagalkot District on consent.

2. Power: Not required

3. Water 0.12 MLD of water from Ghataprabha River, subject to availability.

4. Incentives and Concessions: As applicable under New Industrial Policy 2009-14 of the State.

5. Environment: The promoters to obtain CFE and CFO from KSPCB and environmental clearance from MOEF, GOI.

6. Employment: The Company shall prepare a plan for development of human resources required for the project, train local people and provide employment to these trained local youth and comply with Government policy of Employment to local people i.e. Dr Sarojini Mahishi report. A copy of human resources development plan shall be sent to the Commissioner for I.D. & Director of Industries and Commerce for monitoring.

7. Vendor Development: Where ever there is scope for vendor development for the project, the company shall prepare a vendor development plan develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring

8. Social Infrastructure Development: The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.

9. Others:

1. The promoters shall take all statutory and other necessary clearances including GOI and shall submit milestones/progress in implementation of the project regularly. which will be monitored by the Departments, concerned.

Govt. Order No. CI 233 SPI 2009 dated 07.11.2009 is withdrawn with immediate effect

This approval is valid for a period of two years from the date of issue

By Order and in the name of the Governor of Karnataka,

APARNA PAVATE

Desk Officer (Technical Cell)

Commerce & Industries Department

P.R. 2667

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: 2009-14 ಕೈಗಾರಿಕಾ ನೀತಿಯ ರಾಜ್ಯ ಮಟ್ಟದಲ್ಲಿ ಅಂತರ್ ಇಲಾಖಾ ಉನ್ನತ ಸಮಿತಿ ರಚಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಸಿಐ 233 ಎಸ್‌ಪಿಐ 2008 ದಿ:28.02.2009.

2. ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಕಚೇರಿಯ ಪತ್ರ ಸಂಖ್ಯೆ:ಕೈವಾ/ಐ3/ಕೈ.ನೀ/09 ... ಸಾಮಾನ್ಯ/2009-10 ದಿ:12.10.2009.

ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಕಚೇರಿಯ ಪತ್ರದಲ್ಲಿ ರಾಜ್ಯ ಮಟ್ಟದ ಅಂತರ್ ಇಲಾಖಾ ಉನ್ನತ ಸಮಿತಿ ರಚಿಸಲು ಪ್ರಸ್ತಾಪಿಸಿದ್ದಾರೆ. ಈ ಸಮಿತಿಗೆ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು ಅಧ್ಯಕ್ಷರಾಗಿ, ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರು ಸದಸ್ಯ ಕಾರ್ಯದರ್ಶಿಗಳಾಗಿ ಮತ್ತು ಇತರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಹಾಗೂ ಇಲಾಖೆಯಡಿಯಲ್ಲಿ ಇರುವ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರುಗಳನ್ನು ಸದಸ್ಯರನ್ನಾಗಿ ನೇಮಿಸಲು ಶಿಫಾರಸ್ಸು ಮಾಡಿದ್ದಾರೆ.

ಆದುದರಿಂದ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 256 ಎಸ್‌ಪಿಐ 2009, ಬೆಂಗಳೂರು, ದಿನಾಂಕ: 24ನೇ ನವೆಂಬರ್ 2009

ಕೈಗಾರಿಕಾ ನೀತಿ 2009-14 ರಲ್ಲಿ ಕೈಗಾರಿಕಾ ನೀತಿಗೆ ಸಂಬಂಧಿಸಿದ ಎಲ್ಲ ಕ್ರಮಗಳ ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸಲು "ರಾಜ್ಯ ಮಟ್ಟದಲ್ಲಿ ಅಂತರ್ ಇಲಾಖಾ ಉನ್ನತ ಸಮಿತಿ" ಯನ್ನು ಈ ಮೂಲಕ ರಚಿಸಲಾಗಿದೆ. ಈ ಸಮಿತಿಯು ಈ ಕೈಗಾರಿಕಾ ನೀತಿಗೆ ಸಂಬಂಧಿಸಿದ ಎಲ್ಲ ಆದೇಶಗಳನ್ನು ಸಂಬಂಧಪಟ್ಟ ಇಲಾಖೆಗಳು ಕಾಲ ವಿಳಂಬವಿಲ್ಲದೆ ಜಾರಿಗೊಳಿಸುವುದನ್ನು ಖಚಿತಪಡಿಸುವುದು. ಅಲ್ಲದೆ, ಈ ಸಮಿತಿಯು ಕೈಗಾರಿಕಾ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಾದ ಮಧ್ಯಾವಧಿ ತಿದ್ದುಪಡಿಗಳನ್ನು ಶಿಫಾರಸ್ಸು ಮಾಡುವುದು. ಈ ಕೈಗಾರಿಕಾ ನೀತಿಯ ಅನುಷ್ಠಾನದ ಪ್ರಗತಿಯ ಬಗೆಗೆ ವಾರ್ಷಿಕ ವರದಿಯನ್ನು ಈ ಸಮಿತಿಯು ಪ್ರಕಟಿಸಲಿದೆ.

ರಾಜ್ಯ ಮಟ್ಟದ ಅಂತರ್ ಇಲಾಖೆ ಉನ್ನತ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

ಕ್ರ.ಸಂ	ಹೆಸರು	ನಾಮಧೇಯ
1	ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ	ಅಧ್ಯಕ್ಷರು
2	ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ	ಸದಸ್ಯರು
3	ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ	ಸದಸ್ಯರು
4	ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಉಪಾಧ್ಯಕ್ಷರು
5	ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ	ಸದಸ್ಯರು
6	ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ	ಸದಸ್ಯರು
7	ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ	ಸದಸ್ಯರು
8	ಪ್ರಧಾನ ಕಾರ್ಯದರ್ಶಿಗಳು, ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ	ಸದಸ್ಯರು
9	ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ	ಸದಸ್ಯರು
10	ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ	ಸದಸ್ಯರು
11	ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ	ಸದಸ್ಯರು
12	ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು	ಸದಸ್ಯರು
13	ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು	ಸದಸ್ಯ ಕಾರ್ಯದರ್ಶಿಗಳು
14	ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು	ಸದಸ್ಯರು
15	ಅಧ್ಯಕ್ಷರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು	ಸದಸ್ಯರು
16	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು	ಸದಸ್ಯರು
17	ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ., ಬೆಂಗಳೂರು	ಸದಸ್ಯರು

ಕ್ರ.ಸಂ	ಹೆಸರು	ನಾಮಧೇಯ
18	ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ, ಬೆಂಗಳೂರು	ಸದಸ್ಯರು
19	ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಕಾರ್ಯಕಾರಿ ಸದಸ್ಯರು, ಕೆ.ಐ.ಎ.ಡಿ.ಬಿ, ಬೆಂಗಳೂರು	ಸದಸ್ಯರು
20	ನಿರ್ದೇಶಕರು, ಸಕ್ಕರೆ ನಿರ್ದೇಶನಾಲಯ, ಬೆಂಗಳೂರು	ಸದಸ್ಯರು
21	ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು	ಸದಸ್ಯರು
22	ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು	ಸದಸ್ಯರು
23	ನಿರ್ದೇಶಕರು, ಎ.ಪಿ.ಎಂ.ಸಿ, ಬೆಂಗಳೂರು	ಸದಸ್ಯರು
24	ನಿರ್ದೇಶಕರು, ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಇಲಾಖೆ, ಬೆಂಗಳೂರು.	ಸದಸ್ಯರು
25	ಅಧಿಕ ನಿರ್ದೇಶಕರು(ಸಪ್ರಕೈ), ಕೈವಾಇ, ಬೆಂಗಳೂರು	ಸದಸ್ಯರು
26	ಅಧಿಕ ನಿರ್ದೇಶಕರು(ಜಿಕೈಕೇ) , ಕೈವಾಇ, ಬೆಂಗಳೂರು	ಸದಸ್ಯರು
27	ಅಧಿಕ ನಿರ್ದೇಶಕರು(ವಿಶ್ವ) , ಕೈವಾಇ, ಬೆಂಗಳೂರು	ಸದಸ್ಯರು
28	ನಿರ್ದೇಶಕರು (ತಾಂತ್ರಿಕ ಕೋಶ), ವಾಕೈಇ, ಬೆಂಗಳೂರು	ಸದಸ್ಯರು
29	ಜಂಟಿ ನಿರ್ದೇಶಕರು(ಕೈಗಾರಿಕಾಭಿವೃದ್ಧಿ) , ಕೈವಾಇ, ಬೆಂಗಳೂರು	ಸದಸ್ಯರು
30	ವ್ಯವಸ್ಥಾಪಕ ನಿರ್ದೇಶಕರು, ಕೆ.ಸಿ.ಟಿ.ಯು, ಬೆಂಗಳೂರು	ಸದಸ್ಯರು
31	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು	ಸದಸ್ಯರು
32	ಚೀಫ್ ಇಂಜಿನಿಯರ್, ಕೆ.ಪಿ.ಟಿ.ಸಿ.ಎಲ್, ಬೆಂಗಳೂರು	ಸದಸ್ಯರು
33	ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಮುಖ್ಯ ಸಲಹೆಗಾರರು, ಟೆಕ್ಸಾಕ್, ಬೆಂಗಳೂರು	ಸದಸ್ಯರು
34	ವಿಶೇಷಾಧಿಕಾರಿ, ಫುಡ್ ಕರ್ನಾಟಕ ಲಿಮಿಟೆಡ್, ಬೆಂಗಳೂರು	ಸದಸ್ಯರು
35	ವ್ಯವಸ್ಥಾಪಕರು, ಸ್ಟೇಟ್ ಲೆವಲ್ ಬ್ಯಾಂಕರ್ಸ್ ಕೋ-ಆರ್ಡಿನೇಷನ್ ಕಮಿಟಿ (ಎಸ್.ಎಲ್.ಬಿ.ಸಿ.ಸಿ)	ಸದಸ್ಯರು
36	ನಬಾರ್ಡ್ ಪ್ರತಿನಿಧಿಗಳು, ಬೆಂಗಳೂರು	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಅಪರ್ಣ ಪಾವಟೆ

ಪಿ.ಆರ್. 2669

ಪೀಠಾಧಿಕಾರಿ (ತಾಂತ್ರಿಕ ಕೋಶ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ವಿಷಯ: 2009-10ನೇ ಸಾಲಿನಲ್ಲಿ ಆಹಾರ ಪಾರ್ಕ್ ಯೋಜನೆ ಅನುಷ್ಠಾನಕ್ಕೆ 3ನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಅಧಿಕ ನಿರ್ದೇಶಕರು (ಸಪ್ರಕೈ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಪತ್ರ ಸಂಖ್ಯೆ: ಸಪ್ರಕೈ/ಎಸ್1/ಆಹಾರ ಪಾರ್ಕ್/17/2009-10 ದಿನಾಂಕ 29-05-2009 ಮತ್ತು ದಿನಾಂಕ:23.06.2009.

2. ಸರ್ಕಾರದ ಆದೇಶ ಸಂಖ್ಯೆ: ಸಿಐ 352 ಎಸ್‌ಪಿಐ 2008 ದಿನಾಂಕ 24.06.2009.

3. ಸರ್ಕಾರದ ಆದೇಶ ಸಂಖ್ಯೆ: ಸಿಐ 352 ಎಸ್‌ಪಿಐ 2008 ದಿನಾಂಕ 26.10.2009.

ಪ್ರಸ್ತಾವನೆ:

ಅಧಿಕ ನಿರ್ದೇಶಕರು (ಸಪ್ರಕೈ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರು ಮೇಲೆ (1) ಮತ್ತು (2)ರಲ್ಲಿ ಓದಲಾದ ಪತ್ರಗಳ ದಿನಾಂಕ 29.05.2009 & 23.06.2009 ರಲ್ಲಿ ಅನುಷ್ಠಾನದ ಹಂತದಲ್ಲಿರುವ ಮಾಲೂರು, ಹಿರಿಯೂರು, ಜೇವರ್ಗಿ ಮತ್ತು ಬಾಗಲಕೋಟೆ ಆಹಾರ ಪಾರ್ಕ್‌ಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕಾಗಿರುವುದರಿಂದ 2009-10ನೇ ಸಾಲಿನಲ್ಲಿ ಒದಗಿಸಿರುವ ಅನುದಾನದಲ್ಲಿ ರೂ.286.25 ಲಕ್ಷ ಬಿಡುಗಡೆ ಮಾಡಲು ಕೋರಿರುತ್ತಾರೆ ಮತ್ತು ಶಿವಮೊಗ್ಗ ಆಹಾರ ಪಾರ್ಕ್ ಅಭಿವೃದ್ಧಿಗಾಗಿ ರೂ.100.00 ಲಕ್ಷ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ 24.06.2009 ರಲ್ಲಿ ರೂ.100.00 ಲಕ್ಷಗಳನ್ನು ಶಿವಮೊಗ್ಗ ಆಹಾರ ಪಾರ್ಕ್ ಅಭಿವೃದ್ಧಿಗಾಗಿ ಮತ್ತು ಮೇಲೆ (3) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ 26.10.2009 ರಲ್ಲಿ

ರೂ.100.00 ಲಕ್ಷಗಳನ್ನು, ಅನುಷ್ಠಾನದ ಹಂತದಲ್ಲಿರುವ ಮಾಲೂರು, ಹಿರಿಯೂರು, ಜೇವರ್ಗಿ ಮತ್ತು ಬಾಗಲಕೋಟೆ ಆಹಾರ ಪಾರ್ಕ್‌ಗಳ ಅಭಿವೃದ್ಧಿ ಕಾರ್ಯಗಳಿಗೆ ಬಿಡುಗಡೆ ಮಾಡಲಾಗಿದೆ. ಒಟ್ಟು ರೂ.200.00 ಲಕ್ಷಗಳನ್ನು ಆಹಾರ ಪಾರ್ಕ್ ಯೋಜನೆ ಅನುಷ್ಠಾನಕ್ಕಾಗಿ ಬಿಡುಗಡೆಗೊಳಿಸಲಾಗಿದೆ. ಇನ್ನೂ ರೂ.186.25 ಲಕ್ಷಗಳಷ್ಟು ಮೊತ್ತವನ್ನು ಬಿಡುಗಡೆಗೊಳಿಸಬೇಕಾಗಿರುತ್ತದೆ.

ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಕ್ರಮ ಸಂಖ್ಯೆ: ಸಿಐ 352 ಎಸ್‌ಪಿಐ 2008, ಬೆಂಗಳೂರು, ದಿನಾಂಕ: 20ನೇ ನವೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಾಲೂರು, ಹಿರಿಯೂರು, ಜೇವರ್ಗಿ ಮತ್ತು ಬಾಗಲಕೋಟೆ ಆಹಾರ ಪಾರ್ಕ್‌ಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲು 2009–10ನೇ ಸಾಲಿನಲ್ಲಿ ರೂ.100.00 ಲಕ್ಷಗಳ ಅನುದಾನವನ್ನು ಈ ಮೂಲಕ ಬಿಡುಗಡೆ ಮಾಡಲಾಗಿದೆ.

ಸದರಿ ಮೊತ್ತವನ್ನು ವಿಶೇಷ ಅಧಿಕಾರಿ, ಆಹಾರ ಕರ್ನಾಟಕ ನಿಯಮಿತ, ಬೆಂಗಳೂರು ರವರು ಸ್ವೀಕೃತಿ ರಸೀದಿಯ ಮೇಲೆ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆರವರ ಮೇಲು ರುಜು ಪಡೆದು ಖಜಾನೆಯಿಂದ ಡ್ರಾ ಮಾಡಲು ಆದೇಶಿಸಿದೆ.

ಈ ಮೊತ್ತವನ್ನು 2009–10 ಸಾಲಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಲೆಕ್ಕಶೀರ್ಷಿಕೆ 4851–00–800–5–00–132 Capital Expenses "ಆಹಾರ ಪಾರ್ಕ್" ಅಡಿಯಲ್ಲಿ ಆಹಾರ ಪಾರ್ಕ್‌ಗಳ ಅಭಿವೃದ್ಧಿಗೋಸ್ಕರ ರೂ.1000.00 ಲಕ್ಷಗಳ ಅನುದಾನದ ಅಡಿ ಲಭ್ಯವಿರುವ ಆಯವ್ಯಯದಿಂದ ಭರಿಸುವುದು.

ಆರ್ಥಿಕ ಇಲಾಖೆ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ 16.5.2008 ರನ್ವಯ ಕಾರ್ಯದರ್ಶಿಗಳಿಗೆ ಅನುದಾನ ಬಿಡುಗಡೆ ಮಾಡಲು ಪ್ರತ್ಯಾಯೋಜಿಸಿರುವ ಅಧಿಕಾರದಡಿ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಅಪರ್ಣ ಪಾವಟೆ

ಪಿ.ಆರ್. 2695

ಪೀಠಾಧಿಕಾರಿ (ತಾಂತ್ರಿಕ ಕೋಶ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

COMMERCE AND INDUSTRIES SECRETARIAT

Sub: Nomination of Shri I.S.N. Prasad, IAS as a Director on the Board of ONGC Mangalore Petrochemicals Ltd., (OMPL) – regarding.

Read: 1) G.O.No. CI 180 SPI 2009 Bangalore, Dated : 22-7-09.

2) Chairman, Managing Director, Oil & Natural Gas Corporation Ltd., D.O. Letter NO. CMD/03 Dated : 05-11-2009.

PREAMBLE:

Sri I.S.N Prasad, IAS has been designated as the Coordinator of the Mangalore SEZ Project and has been nominated as a Director on the Board of Mangalore SEZ in the Government Order read at (1).

The Chairman and Managing Director, of ONGC has requested the State Government to nominate Sri. I S.N. Prasad, IAS as a Director on the Board of Oil & Natural Gas Corporation Mangalore Petrochemicals Ltd., (OMPL) in the interest of providing synergy between the two projects. Hence the following order.

Government Order No. CI 180 SPI 2009, Bangalore, Dated: 4th December 2009

The Government is please to nominate Sri I.S.N. Prasad, IAS as a Director on the Board of Oil & Natural Gas Corporation Mangalore Petrochemicals Ltd., (OMPL) with immediate effect.

By order and in the name of the Governor of Karnataka.

APARNA PAVATE

P.R. 2760

Desk Officer (Technical Cell)

Commerce & Industries Department

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಶಿವಮೊಗ್ಗ ವಿಭಾಗದಲ್ಲಿ 2009ನೇ ಸಾಲಿನಲ್ಲಿ ನೆಡುತೋಪುಗಳ ನಿರ್ಮಾಣದ ಪ್ರಾಯೋಜನೆಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ಇವರ ಪತ್ರ ಸಂಖ್ಯೆ: ಕಅಅನಿ/ಎ3/2009/ಕೆ.ಎಸ್/2008-09, ದಿನಾಂಕ: 16-10-2008 ಹಾಗೂ 28-08-2009.

ಪ್ರಸ್ತಾವನೆ:

ಮೇಲೆ ಓದಲಾದ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ಬೆಂಗಳೂರು ಇವರು ತಮ್ಮ ದಿನಾಂಕ: 16-10-2008ರ ಪತ್ರದಲ್ಲಿ ಶಿವಮೊಗ್ಗ ಸೆಕ್ಟರಿನಡಿಯಲ್ಲಿ 2009ನೇ ಸಾಲಿಗೆ 1500 ಹೆಕ್ಟೇರ್ ಕ್ಷೇತ್ರದಲ್ಲಿ ಪಲ್ಪ್‌ವುಡ್ ನೆಡುತೋಪುಗಳನ್ನು ಬೆಳೆಸುವ ಸಲುವಾಗಿ ಒಂದು ಮರು ನಾಟಿಕೆ ಪ್ರಾಯೋಜನೆಯನ್ನು ತಯಾರಿಸಿ ಆಡಳಿತಾತ್ಮಕ ಮಂಜೂರಾತಿ ಕೋರಿದ್ದು, ನಿಗಮವು ರಾಜ್ಯದಲ್ಲಿರುವ ಪಲ್ಪ್‌ವುಡ್ ಕೈಗಾರಿಕಾ ಸಂಸ್ಥೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳನ್ನು ಒದಗಿಸುವ ಸಲುವಾಗಿ ನೀಲಗಿರಿ ನೆಡುತೋಪುಗಳನ್ನು ಬೆಳೆಸುತ್ತಿದೆ. ಶಿವಮೊಗ್ಗ ವಿಭಾಗದ ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ, ಕೋಲಾರ ಮತ್ತು ಬೆಂಗಳೂರು ವ್ಯಾಪ್ತಿಯ ಅರಣ್ಯ ಪ್ರದೇಶಗಳ ಪೈಕಿ 2008-09ನೇ ಸಾಲಿನಲ್ಲಿ ಈಗಾಗಲೇ ಬೆಳೆಸಿ ಮೂರು ಬಾರಿ ಕಟಾವು ಮಾಡಿದಂತಹ ಕ್ಷೇತ್ರಗಳಲ್ಲಿ ಹೆಚ್ಚು ಇಳುವರಿ ನೀಡುವಂತಹ ಅಕೇಶಿಯಾ ಹೈಬ್ರಿಡ್ (ಕ್ಲೋನ್ಸ್), ನೀಲಗಿರಿ ಕ್ಲೋನ್ಸ್ ನಿಲಗಿರಿ ಪೆಲ್ಲೆಟಾ, ಯುರೋಫಿಲ್ಲಾ ಹಾಗೂ ಅಕೇಶಿಯಾ ಸ್ಟ್ರಿಂಗ್‌ವೆಲ್ ಜಾತಿಯ ಗಿಡಗಳ ಮರುನಾಟಿಕೆ ಮಾಡಲು 1500.00 ಹೆಕ್ಟೇರ್ ಕ್ಷೇತ್ರದಲ್ಲಿ ಪಲ್ಪ್‌ವುಡ್ ಮರುನಾಟಿಕೆ ಮಾಡಲು ಪ್ರಾಯೋಜನೆಯನ್ನು ರೂ. 5,77,827.00 ಲಕ್ಷಗಳ ವೆಚ್ಚದಲ್ಲಿ ತಯಾರಿಸಿ ದಿನಾಂಕ: 23-09-2008 ರಂದು ನಡೆದ ನಿಗಮದ 216ನೇ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆಯಲಾಗಿದೆ ಎಂದೂ ಹಾಗೂ ಸದರಿ ಪ್ರಾಯೋಜನೆಗೆ ತಗಲುವ ವೆಚ್ಚವನ್ನು ತನ್ನ ನಿಗಮದ ಆಂತರಿಕ ಸಂಪನ್ಮೂಲಗಳಿಂದಲೇ ಭರಿಸಲಾಗುವುದೆಂದು ತಿಳಿಸಿ, ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 46 ಎಫ್‌ಪಿಸಿ 2009 ಬೆಂಗಳೂರು, ದಿನಾಂಕ: 17ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಶಿವಮೊಗ್ಗ ವಿಭಾಗದ ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ, ಕೋಲಾರ ಮತ್ತು ಬೆಂಗಳೂರು ಸೆಕ್ಟರಿನಡಿಯಲ್ಲಿ 2009ನೇ ಸಾಲಿಗೆ 1500.00 ಹೆಕ್ಟೇರ್ ಕ್ಷೇತ್ರದಲ್ಲಿ ರೂ. 577.827 ಲಕ್ಷಗಳ ವೆಚ್ಚದಲ್ಲಿ (ಐದು ಕೋಟಿ ಎಪ್ಪತ್ತೇಳು ಲಕ್ಷದ ಎಂಬತ್ತೆರಡು ಸಾವಿರದ ಏಳು ನೂರು ರೂಪಾಯಿಗಳು ಮಾತ್ರ) ಪಲ್ಪ್‌ವುಡ್ ನೆಡುತೋಪುಗಳನ್ನು ನಿರ್ಮಾಣ ಮಾಡಲು ಅಕೇಶಿಯಾ ಹೈಬ್ರಿಡ್ (ಕ್ಲೋನ್ಸ್) ನೀಲಗಿರಿ ಕ್ಲೋನ್ಸ್, ನೀಲಗಿರಿ ಪೆಲ್ಲೆಟಾ, ಯುರೋಫಿಲ್ಲಾ ಹಾಗೂ ಅಕೇಶಿಯಾ ಸ್ಟ್ರಿಂಗ್‌ವೆಲ್ ಜಾತಿಯ ಗಿಡಗಳ ಮರು ನಾಟಿಕೆ ಪ್ರಾಯೋಜನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿದೆ.

2. ಸದರಿ ಪ್ರಾಯೋಜನೆಗೆ ತಗಲುವ ವೆಚ್ಚವನ್ನು ನಿಗಮದ ಆಂತರಿಕ ಸಂಪನ್ಮೂಲಗಳಿಂದಲೇ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2831

ಪಿ.ಆರ್. ಕಲಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ: ಹಾಸನ ಜಿಲ್ಲೆಯ ಜಿಲ್ಲಾ ಮುಖ್ಯ ರಸ್ತೆಗಳನ್ನು ಕೆಳದರ್ಜೆಗಿಳಿಸುವ ಬಗ್ಗೆ.

ಓದಲಾಗಿದೆ: ಶ್ರೀ ಹೆಚ್.ಡಿ. ದೇವೇಗೌಡ, ಲೋಕಸಭಾ ಸದಸ್ಯರು, ಇವರ ಪತ್ರದ ದಿನಾಂಕ: 06-11-2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಶ್ರೀ ಹೆಚ್.ಡಿ. ದೇವೇಗೌಡ, ಲೋಕಸಭಾ ಸದಸ್ಯರು ಹಾಸನ ಜಿಲ್ಲೆಯ ಜಿಲ್ಲಾ ಮುಖ್ಯ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಅನುದಾನದ ಕೊರತೆಯಿಂದ ಸಮಗ್ರವಾಗಿ ಅಭಿವೃದ್ಧಿಪಡಿಸಲು ಸಾಧ್ಯವಾಗದೇ ಇರುವುದರಿಂದ ಈ ಕೆಳಕಂಡ ರಸ್ತೆಗಳನ್ನು ಕೆಳದರ್ಜೆಗಿಳಿಸಿ ಪಿ.ಎಂ.ಜಿ.ಎಸ್.ವೈ. ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಕ್ರ ಸಂ	ರಸ್ತೆಗಳ ವಿವರ	ಉದ್ದ (ಕಿ.ಮೀ.ಗಳಲ್ಲಿ)
1	ಬಿ.ಎನ್.ಕೆ. ರಸ್ತೆಯಿಂದ ಹೂವಿನಹಳ್ಳಿ-ಕುಂಕುಮದ ಹೊಸೂರು-ಉಗ್ಗನಹಳ್ಳಿ-ಅಗ್ರಹಾರ ಗೇಟ್ ಸೇರುವ ರಸ್ತೆ.	8.00
2	ಬನಕುಪ್ಪೆ-ಶಿವಪುರ-ಕಾಮೇನಹಳ್ಳಿ ರಸ್ತೆ	4.00
3	ಬಿ.ಟಿ ರಸ್ತೆಯಿಂದ-ಕಿನ್ನರಹಳ್ಳಿ-ಮಾಚಗೌಡನಹಳ್ಳಿ-ಮೂಡಲಕೊಪ್ಪಲು-ಹರದನಹಳ್ಳಿಗೆ ಸೇರುವ ರಸ್ತೆ	6.00
4	ಬಿ.ಎಂ. ರಸ್ತೆಯಿಂದ-ಗಾಡೇನಹಳ್ಳಿ ರಸ್ತೆ ಮಾರ್ಗ ಹೇಮಗಂಗೋತ್ರಿ ಕಾಲೇಜು-ಸಮುದ್ರವಳ್ಳಿ-ಮೈಲನಹಳ್ಳಿ-ಚಟ್ನಹಳ್ಳಿ ರಸ್ತೆ	8.00

ಕ್ರ ಸಂ	ರಸ್ತೆಗಳ ವಿವರ	ಉದ್ದ (ಕಿ.ಮೀ.ಗಳಲ್ಲಿ)
5	ಶಾಂತಿಗ್ರಾಮದಿಂದ ಬೆಣಗಟ್ಟೆ ಮಾರ್ಗ ದೇವಿಹಳ್ಳಿ ಸೇರುವ ರಸ್ತೆ	3.00
6	ಶಾಂತಿಗ್ರಾಮದಿಂದ ಅಮ್ಮನಗುಡಿಕೊಪ್ಪಲು ಸೇರುವ ರಸ್ತೆ	2.00
7	ಬೂಕನಬೆಟ್ಟ-ಸೂರಹಳ್ಳಿ-ಬಸವನಹಳ್ಳಿ-ಹುಳಿಕೆರೆ-ಚನ್ನಹಳ್ಳಿ-ಪರಮ-ಶ್ರವಣಬೆಳಗೊಳ	12.00
8	ಎಂ.ಕೆ. ಹೊಸೂರು-ನಂಜಿಹಳ್ಳಿ-ಜಿನ್ನೇನಹಳ್ಳಿ	8.00
9	ಅಗಸರಹಳ್ಳಿ-ಹೊಗೆಹಳ್ಳಿ-ಎಂ.ಶಿವರ-ಕಾಮನಹಳ್ಳಿ-ಸೋಮನಹಳ್ಳಿ-ಹೊಸೂರು-ಹೊಸೂರು ಕಾಲೋನಿ ರಸ್ತೆ	9.00
10	ಉಂಗರಗೆರೆ-ಮಸಗನಹಳ್ಳಿ-ನೇರಳೆಕೆರೆ-ಹೊಸೂರು-ಬೆಳಗುಲಿ ರಸ್ತೆ	9.00
11	ಪಿ.ದಾಸಾಪುರ-ಕೆ.ಚೌಡೇನಹಳ್ಳಿ-ಗೊಲ್ಲರಹೊಸಳ್ಳಿ-ಕೆ. ಒಡ್ಡರಹಳ್ಳಿ-ಕಲಸಿಂದ-ರಂಗಾಪುರ-ಮಾಳೆಕೊಪ್ಪಲು-ಕೆರೆಚಿಕ್ಕೇನಹಳ್ಳಿ	9.00
12	ಜೀಚಗೌಡನಹಳ್ಳಿ-ಬಸವನಪುರ-ಚಿಕ್ಕರಸನಹಳ್ಳಿ- ಬಾಳೇಹಳ್ಳಿ	8.00
13	ಮೂಡನಹಳ್ಳಿ-ಕುಂಬಾರಹಳ್ಳಿ-ಜಿ. ಕಾಳೇನಹಳ್ಳಿ-ಕೃಷ್ಣಾಪುರ-ಕೊರಟಹಳ್ಳಿ	8.00
14	ಚೋಳೇನಹಳ್ಳಿ-ನಲ್ಲೂರು-ದೊಡ್ಡಗನ್ನಿ ರಸ್ತೆ	6.00
15	ಬೇಟಿಗನಹಳ್ಳಿ-ಮಂಚೇನಹಳ್ಳಿ-ಬೊಮ್ಮೇನಹಳ್ಳಿ-ಹಳೆಬೆಳಗೊಳ-ಸೋರಹಳ್ಳಿ	8.00
	ಒಟ್ಟು:	**108.00**

ಮಾನ್ಯ ಲೋಕಸಭಾ ಸದಸ್ಯರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋಇ 608 ಸಿಆರ್‌ಎಂ 2009 ಬೆಂಗಳೂರು, ದಿನಾಂಕ: 3ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭದಲ್ಲಿ ಓನ್ನೆಲೆಯಲ್ಲಿ ಹಾಸನ ಜಿಲ್ಲೆಯ ಈ ಕೆಳಕಂಡ 15 (ಹದಿನೈದು) ಜಿಲ್ಲಾ ಮುಖ್ಯ ರಸ್ತೆಗಳನ್ನು ನಿಯಮಾನುಸಾರ ಕೆಳದರ್ಜೆಗಿಳಿಸಿ (Denotify) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಶಕ್ಕೆ ನೀಡಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕ್ರ ಸಂ	ರಸ್ತೆಗಳ ವಿವರ	ಉದ್ದ (ಕಿ.ಮೀ.ಗಳಲ್ಲಿ)
1	ಸಿ.ಎನ್.ಕೆ. ರಸ್ತೆಯಿಂದ ಹೂವಿನಹಳ್ಳಿ-ಕುಂಕುಮದ ಹೊಸೂರು-ಉಣ್ಣೇನಹಳ್ಳಿ,-ಅಗ್ರಹಾರ ಗೇಟ್ ಸೇರುವ ರಸ್ತೆ.	8.00
2	ಬನಕುಪ್ಪೆ-ಶಿವಪುರ-ಕಾಮೇನಹಳ್ಳಿ ರಸ್ತೆ	4.00
3	ಬಿ.ಟಿ ರಸ್ತೆಯಿಂದ-ಕಿನ್ನರಹಳ್ಳಿ-ಮಾಚಗೌಡನಹಳ್ಳಿ-ಮೂಡಲಕೊಪ್ಪಲು-ಹರದನಹಳ್ಳಿಗೆ ಸೇರುವ ರಸ್ತೆ	6.00
4	ಬಿ.ಎಂ. ರಸ್ತೆಯಿಂದ-ಗಾಡೇನಹಳ್ಳಿ ರಸ್ತೆ ಮಾರ್ಗ ಹೇಮಗಂಗೋತ್ರಿ ಕಾಲೇಜು-ಸಮುದ್ರವಳ್ಳಿ-ಮೈಲನಹಳ್ಳಿ-ಚಟ್ನಹಳ್ಳಿ ರಸ್ತೆ	8.00
5	ಶಾಂತಿಗ್ರಾಮದಿಂದ ಬೆಣಗಟ್ಟೆ ಮಾರ್ಗ ದೇವಿಹಳ್ಳಿ ಸೇರುವ ರಸ್ತೆ	3.00
6	ಶಾಂತಿಗ್ರಾಮದಿಂದ ಅಮ್ಮನಗುಡಿಕೊಪ್ಪಲು ಸೇರುವ ರಸ್ತೆ	2.00
7	ಬೂಕನಬೆಟ್ಟ-ಸೂರಹಳ್ಳಿ-ಬಸವನಹಳ್ಳಿ-ಹುಳಿಕೆರೆ-ಚನ್ನಹಳ್ಳಿ-ಪರಮ-ಶ್ರವಣಬೆಳಗೊಳ	12.00
8	ಎಂ.ಕೆ. ಹೊಸೂರು-ನಂಜಿಹಳ್ಳಿ-ಜಿನ್ನೇನಹಳ್ಳಿ	8.00
9	ಅಗಸರಹಳ್ಳಿ-ಹೊಗೆಹಳ್ಳಿ-ಎಂ.ಶಿವರ-ಕಾಮನಹಳ್ಳಿ-ಸೋಮನಹಳ್ಳಿ-ಹೊಸೂರು-ಹೊಸೂರು ಕಾಲೋನಿ ರಸ್ತೆ	9.00
10	ಉಂಗರಗೆರೆ-ಮಸಗನಹಳ್ಳಿ-ನೇರಳೆಕೆರೆ-ಹೊಸೂರು-ಬೆಳಗುಲಿ ರಸ್ತೆ	9.00
11	ಪಿ.ದಾಸಾಪುರ-ಕೆ.ಚೌಡೇನಹಳ್ಳಿ-ಗೊಲ್ಲರಹೊಸಳ್ಳಿ-ಕೆ. ಒಡ್ಡರಹಳ್ಳಿ-ಕಲಸಿಂದ-ರಂಗಾಪುರ-ಮಾಳೆಕೊಪ್ಪಲು-ಕೆರೆಚಿಕ್ಕೇನಹಳ್ಳಿ	9.00
12	ಬೀಚಗೌಡನಹಳ್ಳಿ-ಬಸವನಪುರ-ಚಿಕ್ಕರಸನಹಳ್ಳಿ- ಬಾಳೇಹಳ್ಳಿ	8.00
13	ಮೂಡನಹಳ್ಳಿ-ಕುಂಬಾರಹಳ್ಳಿ-ಬಿ. ಕಾಳೇನಹಳ್ಳಿ-ಕೃಷ್ಣಾಪುರ-ಕೊರಟಹಳ್ಳಿ	8.00
14	ಚೋಳೇನಹಳ್ಳಿ-ನಲ್ಲೂರು-ದೊಡ್ಡಗನ್ನಿ ರಸ್ತೆ	6.00
15	ಬೇಟಗನಹಳ್ಳಿ-ಮಂಚೇನಹಳ್ಳಿ-ಬೊಮ್ಮೇನಹಳ್ಳಿ-ಹಳೆಬೆಳಗೊಳ-ಸೋರಹಳ್ಳಿ	8.00
	ಒಟ್ಟು :	**108.00**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ. ದೇವಿಪ್ರಸಾದ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

ಪಿ.ಆರ್. 2832

ವಸತಿ ಸಚಿವಾಲಯ

ವಿಷಯ: ಬೀದರ್ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂ. ವಇ 42 ಹೆಚ್‌ಎಎಂ 1999 ದಿನಾಂಕ: 10-05-2000.

2) ಸರ್ಕಾರದ ಆದೇಶ ಸಂ. ವಇ 9 ಹೆಚ್‌ಎಎಂ 2008 ದಿನಾಂಕ: 17-02-2009.

ಪ್ರಸ್ತಾವನೆ:

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದ ಬೀದರ್ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸಲಾಗಿದ್ದು, ಖಾಲಿ ಇದ್ದ ಅಲ್ಪಸಂಖ್ಯಾತ ಪ್ರತಿನಿಧಿಯ ಹುದ್ದೆಗೆ ನಾಮನಿರ್ದೇಶಿಸುತ್ತ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ: ವಇ 55 ಹೆಚ್‌ಎಎಸ್ 2009, ಬೆಂಗಳೂರು, ದಿನಾಂಕ: 10ನೇ ಡಿಸೆಂಬರ್ 2009

ಬೀದರ್ ನಗರ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ. ಮಹಮದ್ ಬಿನ್ ಆಲಿ ತಂದೆ ಮೀರ್ ಖುರ್ಷಿದ್ ಆಲಿ, 04-01-116, ನುರ್ಖಾತಾಲಿಂ, ಮುಸ್ಲಿಂ ಚೌಕ್, ಬೀದರ್	ಅಲ್ಪಸಂಖ್ಯಾತ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2833

ಕೆ.ಆರ್. ವಲ್ಲೂರ

ಪೀಠಾಧಿಕಾರಿ-2, ವಸತಿ ಇಲಾಖೆ.

ವಿಷಯ: ಪ್ರವಾಹಪೀಡಿತರಿಗೆ ಮನೆ ನಿರ್ಮಿಸಿಕೊಳ್ಳಲು ನಿವೇಶನ ಖರೀದಿಗಾಗಿ ಅನುದಾನ ಬಿಡುಗಡೆ ಕುರಿತು.

ಓದಲಾಗಿದೆ: ಸರ್ಕಾರದ ಆದೇಶ ಸಂ. ಆಇ 133 ಬಿಆರ್‌ಎಸ್ 2009 ದಿನಾಂಕ: 23-11-2009.

ಪ್ರಸ್ತಾವನೆ:

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ದಿನಾಂಕ: 29-09-2009ರಿಂದ 4-10-2009ರವರೆಗೆ ಸುರಿದ ಧಾರಾಕಾರ ಮಳೆಯಿಂದ ಹಾಗೂ ಪ್ರವಾಹದಿಂದ ಮನೆಗಳನ್ನು ಕಳೆದುಕೊಂಡವರಿಗೆ ಸುರಕ್ಷಿತ ಸ್ಥಳಗಳಲ್ಲಿ ಮನೆಗಳ ನಿರ್ಮಾಣಕ್ಕಾಗಿ ನಿವೇಶನಗಳನ್ನು ರಚಿಸಲು ಖಾಸಗಿ ಜಮೀನು ಖರೀದಿಸಲು 12 ಜಿಲ್ಲೆಗಳಿಗೆ ಈವರೆಗೆ ಒಟ್ಟು 146.04 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಬಳ್ಳಾರಿ, ಧಾರವಾಡ, ಹಾವೇರಿ ಹಾಗೂ ದಾವಣಗೆರೆ ಜಿಲ್ಲಾಧಿಕಾರಿಗಳು ನಿವೇಶನಗಳಿಗಾಗಿ ಜಮೀನು ಖರೀದಿಸಲು ಇನ್ನೂ ಹೆಚ್ಚಿನ ಅನುದಾನ ಬಿಡುಗಡೆ ಮಾಡುವಂತೆ ಕೋರಿರುವ ಮೇರೆಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಈ ಕೆಳಗಿನಂತೆ ಆದೇಶವನ್ನು ಪ್ರಸ್ತಾಪಿಸಿದೆ.

ಸರ್ಕಾರದ ಆದೇಶ ಸಂ: ವಇ 16 ಹೆಚ್‌ಎವೈ 2009(ಭಾ), ಬೆಂಗಳೂರು, ದಿನಾಂಕ: 11ನೇ ಡಿಸೆಂಬರ್ 2009

ಇತ್ತೀಚೆಗೆ ಉಂಟಾದ ನೆರೆಹಾವಳಿಯಿಂದ ಮನೆಗಳನ್ನು ಕಳೆದುಕೊಂಡು ತೊಂದರೆಗೊಳಗಾದವರಿಗೆ ಮನೆಗಳ ನಿರ್ಮಾಣಕ್ಕಾಗಿ ನಿವೇಶನಗಳಿಗಾಗಿ ಜಮೀನು ಖರೀದಿಸಲು ಬಳ್ಳಾರಿ ಜಿಲ್ಲೆಗೆ 2.00 ಕೋಟಿ ರೂ.ಗಳು ಧಾರವಾಡ ಜಿಲ್ಲೆಗೆ, 2.00 ಕೋಟಿ ರೂ.ಗಳು, ಹಾವೇರಿ ಜಿಲ್ಲೆಗೆ 1.00 ಕೋಟಿ ರೂ.ಗಳು ಹಾಗೂ ದಾವಣಗೆರೆ ಜಿಲ್ಲೆಗೆ 4.00 ಕೋಟಿ ರೂ.ಗಳು ಹೀಗೆ ಒಟ್ಟು 9.00 ಕೋಟಿ ರೂ.ಗಳನ್ನು (ಒಂಭತ್ತು ಕೋಟಿ ರೂ.ಗಳು ಮಾತ್ರ) ಲೆಕ್ಕಶೀರ್ಷಿಕೆ 2216-03-102-0-01-059 (ಯೋಜನೆ) ಅಡಿಯಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ, ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ಪಡೆಯಲು ಬಿಡುಗಡೆ ಮಾಡಲಾಗಿದೆ.

2) ನೆರೆಹಾವಳಿಯಿಂದ ತೊಂದರೆಗೊಳಗಾದವರಿಗೆ ಮನೆ ನಿರ್ಮಾಣಕ್ಕಾಗಿ ಹಂಚುವ ನಿವೇಶನಗಳಿಗಾಗಿ ಜಮೀನು ಖರೀದಿಸಲು ಮಾತ್ರ ಈ ಅನುದಾನವನ್ನು ಉಪಯೋಗಿಸಿಕೊಳ್ಳತಕ್ಕದ್ದು. ಈ ದಿಸೆಯಲ್ಲಿ ಕಂದಾಯ ಇಲಾಖೆಯ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಜಿಲ್ಲಾಧಿಕಾರಿಗಳು ವೈಯಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

3) ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಆಇ 113 ಬಿಆರ್‌ಎಸ್ 2009 ದಿನಾಂಕ: 23-11-2009 ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2834

ಕೆ.ಆರ್. ವಲ್ಲೂರ

ಪೀಠಾಧಿಕಾರಿ-2, ವಸತಿ ಇಲಾಖೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಶ್ರೀ ಜಿ.ಹೆಚ್. ಸಿದ್ದಪ್ಪ, ಕೆಎಎಸ್ (ಕಿರಿಯ ಶ್ರೇಣಿ) ಹಿಂದಿನ ಉಪವಿಭಾಗಾಧಿಕಾರಿ, ಹಾವೇರಿ ಉಪ ವಿಭಾಗ ಹಾಗೂ ಆಡಳಿತಾಧಿಕಾರಿ, ನಗರ ಯೋಜನಾ ಪ್ರಾಧಿಕಾರ, ರಾಣೆಬೆನ್ನೂರು ಇವರ ವಿರುದ್ಧ ಶಿಸ್ತು ವಿಚಾರಣೆ ಅಂತಿಮ ಆದೇಶ

ಓದಲಾಗಿದೆ: 1) ದಿನಾಂಕ: 04-07-08ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 252 ಕೆಇವಿ 07
2) ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ ಹಾಗೂ ವಿಚಾರಣಾಧಿಕಾರಿಗಳು ಇವರ ವಿಚಾರಣಾ ವರದಿ ಸಂಖ್ಯೆ: ಸಿಬ್ಬಂದಿ (1) ಇಎಪಿ-87: 2008-09, ದಿನಾಂಕ: 06/05-04-09
3) ದಿನಾಂಕ: 04-07-09ರ ನೋಟೀಸು ಸಂಖ್ಯೆ: ಸಿಆಸುಇ 252 ಕೆಇವಿ 07

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ, ಶ್ರೀ ಜಿ.ಹೆಚ್. ಸಿದ್ದಪ್ಪ, ಕೆಎಎಸ್ (ಕಿರಿಯ ಶ್ರೇಣಿ) ಇವರು ಉಪವಿಭಾಗಾಧಿಕಾರಿ, ಹಾವೇರಿ ಉಪ ವಿಭಾಗ ಹಾವೇರಿ ಹಾಗೂ ಆಡಳಿತಾಧಿಕಾರಿ, ನಗರ ಯೋಜನಾ ಪ್ರಾಧಿಕಾರ, ರಾಣೆಬೆನ್ನೂರು ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಪ್ರಾಧಿಕಾರದ ಕಟ್ಟಡ ನಿರ್ಮಾಣಕ್ಕಾಗಿ ಕರೆಯಲಾದ ಟೆಂಡರಿನಲ್ಲಿ ಕಡಿಮೆ ಮೊತ್ತ ನಮೂದಿಸಿದ ಗುತ್ತಿಗೆದಾರರನ್ನು ಕಡೆಗಣಿಸಿ, ಹೆಚ್ಚಿನ ಮೊತ್ತ ನಮೂದಿಸಿದ ಗುತ್ತಿಗೆದಾರರಿಗೆ ಗುತ್ತಿಗೆ ಮಂಜೂರು ಮಾಡುವ ಮೂಲಕ ಅಧಿಕಾರ ದುರುಪಯೋಗ ಮತ್ತು ಆರ್ಥಿಕ ನಷ್ಟಕ್ಕೆ ಕಾರಣರಾಗಿ ದುರ್ನಡತೆ ಎಸಗಿರುವ ಆರೋಪದಲ್ಲಿನ ಸತ್ಯಾಸತ್ಯತೆಯ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು, ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ ರವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಉಪ ವಿಭಾಗಾಧಿಕಾರಿ, ಹಾವೇರಿ ಉಪ ವಿಭಾಗ, ಹಾವೇರಿ ರವರನ್ನು ಶಿಸ್ತು ಪ್ರಾಧಿಕಾರಿಯ ಪರವಾಗಿ ಮಂಡನಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ವಿಚಾರಣಾಧಿಕಾರಿಗಳು ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಶ್ರೀ ಜಿ.ಹೆಚ್. ಸಿದ್ದಪ್ಪ, ರವರು ರಾಣೆಬೆನ್ನೂರು ನಗರ ಯೋಜನಾ ಪ್ರಾಧಿಕಾರದ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಪ್ರಾಧಿಕಾರದ ಕಟ್ಟಡ ನಿರ್ಮಾಣದ ಅಂದಾಜು ಪಟ್ಟಿ ರೂ. 25.19 ಲಕ್ಷಗಳ ಕಾಮಗಾರಿಯ ಗುತ್ತಿಗೆಯಲ್ಲಿ ಭಾಗವಹಿಸಿದ ಗುತ್ತಿಗೆದಾರರ ಪೈಕಿ ಒಬ್ಬರು ಅಂದಾಜು ಪಟ್ಟಿಗಿಂತ ಶೇಕಡ 1.04ರಷ್ಟು (-1.04%) ಕಡಿಮೆ ದರ (L1) ಮತ್ತೊಬ್ಬರು ಶೇಕಡ 1.08ರಷ್ಟು (+1.08%) ಹೆಚ್ಚಿನ ದರ (L2) ಇನ್ನೊಬ್ಬರು ಶೇಕಡ 10.94ರಷ್ಟು (+10.94%) ಹೆಚ್ಚಿನ ದರ (L3) ನಮೂದಿಸಿರುತ್ತಾರೆ. ಈ ಮೂವರಲ್ಲಿ ಕಡಿಮೆ ದರ ನಮೂದಿಸಿದವರಿಗೆ ಆದ್ಯತೆ ನೀಡಬೇಕಾಗಿದ್ದರೂ, L1 ಮತ್ತು L2 ಗುತ್ತಿಗೆದಾರರ ಬಗ್ಗೆ ಸ್ಥಳೀಯ ವಿಚಾರಣೆ ಮಾಡಿ ಇವರುಗಳು ನಿರ್ವಹಿಸಿರುವ ಕಾಮಗಾರಿಗಳ ಬಗ್ಗೆ ಸಮಾಧಾನಕರ ಮಾಹಿತಿ ಲಭ್ಯವಿಲ್ಲದೇ ಇರುವುದರಿಂದ, ಇವರ ಗುತ್ತಿಗೆ ಪ್ರಸ್ತಾವನೆಯನ್ನು ತಿರಸ್ಕರಿಸಿ, ಆಪಾದಿತ ಅಧಿಕಾರಿಯು ಶೇಕಡ 10.94 ರಷ್ಟು ಹೆಚ್ಚಿನ ದರ ನಮೂದಿಸಿದ ಗುತ್ತಿಗೆದಾರರ (L3) ಗುತ್ತಿಗೆಯನ್ನು ಅಂಗೀಕರಿಸಿರುತ್ತಾರೆ. L1 ಮತ್ತು L2 ರವರುಗಳು ನಿರ್ವಹಿಸಿರುವ ಕಳಪೆ ಕಾಮಗಾರಿಗಳ ಬಗ್ಗೆ ಯಾವುದೇ ದಾಖಲೆ/ಪುರಾವೆಗಳ ಸಾಕ್ಷ್ಯ ಇರುವುದಿಲ್ಲವಾದರೂ ಇವರುಗಳು ನಮೂದಿಸಿದ ಕಡಿಮೆ ದರಗಳು ಅವಾಸ್ತವ ಹಾಗೂ ಸುಳ್ಳು ಸೃಷ್ಟಿಗಳಾಗಿರುತ್ತವೆ ಎಂದು ಯಾವುದೇ ಆಧಾರವಿಲ್ಲದೆ ಇವರ ಗುತ್ತಿಗೆ ಪ್ರಸ್ತಾವನೆಯನ್ನು ರದ್ದುಪಡಿಸಿರುತ್ತಾರೆ ಮತ್ತು ಗುತ್ತಿಗೆ ಷೆಡ್ಯೂಲ್‌ನ 5 ಷರತ್ತುಗಳನ್ನು ಇವರುಗಳು ಪೂರೈಸಿದ್ದರೂ ಸಹ ಪೂರೈಸಿಲ್ಲ ಎಂಬ ಕಾರಣ ನೀಡಿ, ಗುತ್ತಿಗೆ ಷೆಡ್ಯೂಲ್ ನಂ. 14ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ L1 ಮತ್ತು L2 ಗುತ್ತಿಗೆ ಪ್ರಸ್ತಾವನೆಯನ್ನು ತಿರಸ್ಕರಿಸಿರುವುದು ನಿಯಮಗಳ ಉಲ್ಲಂಘನೆಯಾಗಿದ್ದು, ಕರ್ತವ್ಯಲೋಪ ಎಸಗಿರುವುದು ಸ್ಪಷ್ಟವಾಗಿರುತ್ತದೆ. ಅದಕಾರಣ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದಾಗಿ ವರದಿ ನೀಡಿರುತ್ತಾರೆ.

ವಿಚಾರಣಾ ವರದಿಯನ್ನು ಪರಿಶೀಲಿಸಿ, ಸರ್ಕಾರವು ಅಂಗೀಕರಿಸುತ್ತಾ, ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ನೀಡಲಾಗಿದ್ದ 2ನೇ ಕಾರಣ ಕೇಳುವ ನೋಟೀಸಿಗೆ ಶ್ರೀ ಜಿ.ಹೆಚ್. ಸಿದ್ದಪ್ಪ ರವರು ಸಲ್ಲಿಸಿದ ಲಿಖಿತ ಅಹವಾಲು ಯಾವುದೇ ಸಮರ್ಥನೆಯಿಂದ ಕೂಡಿರುವುದಿಲ್ಲವೆಂದು ಪರಿಗಣಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 252 ಕೆಇವಿ 07, ಬೆಂಗಳೂರು, ದಿನಾಂಕ: 4ನೇ ಡಿಸೆಂಬರ್ 2009

